ವಿಜಯಪುರ | ಸಂಪುಟ 02 | ಸಂಚಿಕೆ 62 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಏಪ್ರಿಲ್ 25, 2024



"ಸಂವಿಧಾನದ ತತ್ವ ಉಳಿಸಲು ನಾನು ಕೊನೆ ಉಸಿರು ಇರೋವರೆಗೂ ಹೋರಾಡುವೆ. ಬಿಜೆಪಿ ಮತ್ತು ಆರೆಸ್ಸೆಸ್ ಸಿದ್ಧಾಂತವನ್ನು ಸೋಲಿಸಲು ನನ್ನ ಕೊನೆ ಉಸಿರಿರೋವರೆಗೂ ರಾಜಕೀಯದಲ್ಲಿ ಮುಂದುವರಿಯುತ್ತೇನೆ."

– ಮಲ್ಲಿಕಾರ್ಜುನ ಖರ್ಗೆ
ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರು

**ಇನ್ನು ಮನೆ–ಮನೆಗೆ ತೆರಳಿ ಪ್ರಚಾರ । 14 ಲೋಕಸಭಾ ಕ್ಷೇತ್ರಗಳಿಗೆ ಏ.26ರಂದು ಮೊದಲ ಹಂತದ ಚುನಾವಣೆ**

# ರಾಜ್ಯದಲ್ಲಿ ಮೊದಲ ಹಂತದ ಬಹಿರಂಗ ಪ್ರಚಾರಕ್ಕೆ ತೆರೆ

**ಉದಯರಶ್ಮಿ ನ್ಯೂಸ್**

ಬೆಂಗಳೂರು: ಕರ್ನಾಟಕದ 28 ಲೋಕಸಭೆ ಕ್ಷೇತ್ರಗಳ ಪೈಕಿ 14 ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಮೊದಲ ಹಂತದ ಚುನಾವಣೆ ನಡೆಯಲಿದ್ದು, ಬುಧವಾರ ಬಹಿರಂಗ ಪ್ರಚಾರ ಅಂತ್ಯಗೊಂಡಿದೆ.

ದಕ್ಷಿಣ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಒಟ್ಟು 247 ಅಭ್ಯರ್ಥಿಗಳು ಸೆಣೆಸುತ್ತಿದ್ದಾರೆ. 226 ಪುರುಷರು ಮತ್ತು 21 ಮಹಿಳೆಯರು ಮೊದಲ ಸುತ್ತಿನ ಮತದಾನಕ್ಕಾಗಿ ಕಣದಲ್ಲಿದ್ದಾರೆ. ಅಲ್ಲಿ ಅಂದಾಜು 2.88 ಕೋಟಿ ಮತದಾರರು 30,602 ಮತಗಟ್ಟೆಗಳಲ್ಲಿ ತಮ್ಮ ಹಕ್ಕು ಚಲಾಯಿಸಲಿದ್ದಾರೆ. ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ–ಜನತಾ ದಳ (ಜಾತ್ಯತೀತ) ಮೈತ್ರಿಕೂಟದ ನಡುವೆ ನೇರ ಹಣಾಹಣಿ ನಡೆಯುತ್ತಿದೆ.

ಕಾಂಗ್ರೆಸ್ ಎಲ್ಲಾ 14 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದ್ದರೆ, ಬಿಜೆಪಿ 11 ಮತ್ತು ಅದರ ಮೈತ್ರಿ ಪಾಲುದಾರ ಜೆಡಿಎಸ್ ಮೂರು ಕ್ಷೇತ್ರಗಳಾದ ಹಾಸನ, ಮಂಡ್ಯ ಮತ್ತು ಕೋಲಾರದಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಈ ಮೂರು ಕ್ಷೇತ್ರಗಳ ಜೊತೆಗೆ ಉಡುಪಿ–ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ಸೆಂಟ್ರಲ್, ಬೆಂಗಳೂರು ದಕ್ಷಿಣ ಮತ್ತು ಚಿಕ್ಕಬಳ್ಳಾಪುರಲ್ಲಿ ಚುನಾವಣೆ ನಡೆಯುತ್ತಿದೆ. ಈ 14 ಕ್ಷೇತ್ರಗಳಲ್ಲಿ 2019ರ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಮೈತ್ರಿ ಮಾಡಿಕೊಂಡು ಆಡಳಿತದಲ್ಲಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ತಲಾ ಒಂದು ಕ್ಷೇತ್ರವನ್ನು ಗೆದ್ದುಕೊಂಡಿದ್ದರೆ ಬಿಜೆಪಿ 11ರಲ್ಲಿ ಗೆದ್ದಿದ್ದು ಮಂಡ್ಯದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಶ್ ಅವರನ್ನು ಬೆಂಬಲಿಸಿತ್ತು.



ಚಿಕ್ಕಬಳ್ಳಾಪುರದಲ್ಲಿ ಗರಿಷ್ಠ 29 ಅಭ್ಯರ್ಥಿಗಳಿದ್ದರೆ, ಬೆಂಗಳೂರು ಸೆಂಟ್ರಲ್‌ನಲ್ಲಿ 24 ಮತ್ತು ದಕ್ಷಿಣ ಕನ್ನಡದಲ್ಲಿ ಕನಿಷ್ಠ ಒಂಬತ್ತು ಅಭ್ಯರ್ಥಿಗಳಿದ್ದಾರೆ. ಮಂಡ್ಯದಿಂದ ಎಚ್ ಡಿ ಕುಮಾರಸ್ವಾಮಿ ಹಾಗೂ ಅವರ ಸೋದರ ಮಾವ ಖ್ಯಾತ ಹೃದ್ರೋಗ ತಜ್ಞ ಸಿ ಎನ್ ಮಂಜುನಾಥ್ ಅವರು ಬೆಂಗಳೂರು ಗ್ರಾಮಾಂತರದಿಂದ, ಮೈಸೂರಿನಿಂದ ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬಿಜೆಪಿಯಿಂದ ಸ್ಪರ್ಧಿಸುತ್ತಿದ್ದರೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್ ಸಹೋದರ ಹಾಗೂ ಸಂಸದ ಡಿ ಕೆ ಸುರೇಶ್ ಬೆಂಗಳೂರು ಗ್ರಾಮಾಂತರದಿಂದ ಮೊದಲ ಹಂತದಲ್ಲಿ ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ.

ಇಂದು ಪ್ರಚಾರದ ಕೊನೆಯ ದಿನವಾಗಿದ್ದರಿಂದ ಮತದಾರರ ಓಲೈಕೆಗೆ ಪ್ರಮುಖ ನಾಯಕರು ತೀವ್ರ ಪ್ರಯತ್ನ ನಡೆಸಿದ್ದಾರೆ. ಯಡಿಯೂರಪ್ಪ ತುಮಕೂ–ರಿನ ಪಕ್ಷದ ಅಭ್ಯರ್ಥಿ ವಿ ಸೋಮಣ್ಣ ಪರ ಪ್ರಚಾರ ನಡೆಸಿದರೆ, ಮಂಡ್ಯದಲ್ಲಿ ಕುಮಾರಸ್ವಾಮಿ ರೋಡ್ ಶೋ ನಡೆಸಿದರು. ಬೆಂಗಳೂರಿನಲ್ಲಿ ದೇವೇಗೌಡರು ಸುದ್ದಿಗೋಷ್ಠಿ ನಡೆಸಿದ್ದು, ಕನಕಪುರದಲ್ಲಿ ಶಿವಕುಮಾರ್ ಸಹೋದರ ಸುರೇಶ್ ಪರ ಪ್ರಚಾರ ನಡೆಸಿದರು. ನಾವು ಎಲ್ಲಾ 28 ಸ್ಥಾನಗಳನ್ನು ಗೆಲ್ಲುತ್ತೇವೆ ಎಂಬ ಭರವಸೆ ವ್ಯಕ್ತಪಡಿಸುತ್ತಿರುವ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರು, ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ 14 ಸ್ಥಾನಗಳನ್ನು ನಾವು ಗೆಲ್ಲುತ್ತೇವೆ. ಎಲ್ಲವನ್ನೂ ನಾವು ನೂರಕ್ಕೆ ನೂರು ಗೆಲ್ಲುತ್ತೇವೆ ಎಂದು ತುಮಕೂರಿನಲ್ಲಿ ಹೇಳಿದರು.


ಇನ್ನು ಡಿಕೆ ಶಿವಕುಮಾರ್ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ವಿಶ್ವಾಸ ವ್ಯಕ್ತಪಡಿಸಿದರು. ಕನಕಪುರದಲ್ಲಿ ಕಾಂಗ್ರೆಸ್ ಸರ್ಕಾರದ ಖಾತ್ರಿ ಯೋಜನೆಗಳನ್ನು ಎತ್ತಿ ಹಿಡಿದು ಸಹೋದರ ಡಿಕೆ ಸುರೇಶ್ ಗೆ ಬೆಂಬಲ ನೀಡುವಂತೆ ಕೋರಿದರು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು. ಅಧಿಕಾರಕ್ಕೆ ತರಬೇಕು, ಖಾತರಿ ಯೋಜನೆಗಳ ಲಾಭ ಪಡೆಯಲು ಸಹಕ–ರಿಸಬೇಕು ಎಂದರು.

ಪ್ರಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ 'ಮೋದಿ ಕಾ ಗ್ಯಾರಂಟಿ' ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ನಡುವೆ ಹೋರಾಟ ಕಂಡುಬಂದಿದೆ.

**ರಾಜ ನುಡಿ**

ಅದೆಷ್ಟೇ ಕೊಳೆ ಇದ್ದರೂ
ಒಂದು ಅರ್ಥ ಬರುವ
ಆಕೃತಿಯಾಗಿಸುವ
ಕುಂಬಾರನ ಕೈಯಲ್ಲಿ
ಸಿಕ್ಕ ಕೆಸರಂತಾಗಬೇಕು.
ನಮ್ಮ ಬದುಕನ್ನು
ರೂಪಿಸಿಕೊಳ್ಳೋಣ.
ಇನ್ನೊಬ್ಬರಿಂದ
ನಿರೀಕ್ಷಿಸಿದಷ್ಟು
ವಿರೂಪಗೊಳ್ಳುತ್ತೇವೆ.

–ಡಾ. ರಾಜಶೇಖರ ನಾಗೂರ



**ವಚನ ಚಿಂತನ 365**

*ಕರಸ್ಥಲ ಕಂಠಸ್ಥಲ ಕರ್ಣಸ್ಥಲ*
*ಮಧ್ಯಸ್ಥಲ ಮಹಾಸ್ಥಲ.*
*ಇಂತೀ ಐದು ಸ್ಥಲಂಗಳನು ಮಹಾಸ್ಥಲಕ್ಕೆ ತಂದು,*
*ಬಸವಣ್ಣ ಸಂಪೂರ್ಣವಾದ ಕಾಣಾ,*
*ಕಲಿದೇವರದೇವಾ.*

ಈ ವಚನದಲ್ಲಿ ಇಷ್ಟಲಿಂಗವನ್ನು ಮೊಟ್ಟಮೊದಲ ಬಾರಿಗೆ ಸಂಶೋಧಿಸಿ ಬಳಕೆಗೆ ತಂದವರು ಬಸವಣ್ಣನವರು ಎಂಬ ಸತ್ಯವನ್ನು ಇಲ್ಲಿ ಮಡಿವಾಳ ಮಾಚಿದೇವರು ದಾಖಲಿಸಿದ್ದಾರೆ. ಇಷ್ಟಲಿಂಗ ಪೂಜೆಯಿಂದ ಸಾಧಕನ ಅಂಗದಲ್ಲಿ ಸಂಚರಿಸುವ ಲಿಂಗ ಚೇತನದ ಹರಿವನ್ನು ವಿವ–ರಿಸಲಾಗಿದೆ. ಕರದ ಇಷ್ಟಲಿಂಗ ವನ್ನು ಅನಿಮಿಷ ದೃಷ್ಟಿಯಿಂದ ನೋಡುವಾಗ ಇಷ್ಟಲಿಂಗದ ಮೇಲೆ ಸಾಧಕನದೃಷ್ಟಿಯು ನೆಲೆ ನಿಂತಾಗ ಇಷ್ಟಲಿಂಗ ದಿಂದ ಹೊರಡುವ ಕಿರಣಗಳು ಸಾಧಕನ ಅಂಗದಲ್ಲಿ ಕಣ್ಣುಗಳ ಮೂಲಕ ಪ್ರವೇಶವನ್ನು ಪಡೆಯುತ್ತವೆ.ಆಗ ಕಂಠದಿಂದ ಓಂ ನಮಃ ಶಿವಾ ಯ ಎಂಬ ಮೂಲ ಮಂತ್ರವನ್ನು ಪಠಿಸಲಾಗುತ್ತದೆ ಹಾಗೂ ಕಿವಿ ಗಳಿಗೆ ಕೇವಲ ಮಹಾಲಿಂಗದ ನಾದ(ಪ್ರಣವ ಮೂಲ)ವು ಕೇಳ ಲು ಪ್ರಾರಂಭವಾಗುತ್ತದೆ. ಇದನ್ನು ಕ್ರಮವಾಗಿ ಕಂಠಸ್ಥಲ ಮತ್ತು ಕರಣಸ್ಥಲ ಎಂದು ಕರೆದಿರುವುದು. ಮುಂದುವರೆದು. ಇಷ್ಟಲಿಂಗ ದ ಮೂಲಕ ಹೊರಟ ಚೈತನ್ಯ ಕಿರಣಗಳು ಮಿದುಳಿನ ಭಾಗವನ್ನು ತಲುಪುತ್ತದೆ ಈ ಭಾಗವೆ ಪಿಟ್ಯೂಟರಿ ಗ್ರಂಥಿಯಾಗಿದೆ. ಇದನ್ನು ಇಲ್ಲಿ ಮಧ್ಯಸ್ಥಲ ಎನ್ನಲಾಗಿದೆ. ಆಗ ಅಲ್ಲಿ ಮೆಲಾಟನಿನ್ ಎಂಬ ದ್ರವವು ಸ್ರವಿಸುತ್ತದೆ, ಅದನ್ನು ಸೇವಿಸುವ ಸಾಧಕನಿಗೆ ಮಹದಾನಂದ ಪ್ರಾಪ್ತಿಯಾಗುತ್ತದೆ ಇದು ಮಹಾ ಲಿಂಗದೊಂದಿಗೆ ಪ್ರಾಣ ಲಿಂಗ ಒಂದಾಗುವ ಕ್ಷಣ ಇದನ್ನು ಮಹಾ ಸ್ಥಲ ಎಂದಿದ್ದಾರೆ. ಈ ಪ್ರಕ್ರಿಯೆಯನ್ನು ಮೊದಲಬಾರಿಗೆ ಪ್ರಯತ್ನಿಸಿ ಅನುಭವಿಸಿ ಆನಂದಿ ಸಿ ಸರ್ವರಿಗೂ ಈ ವಿಧಾನವನ್ನು 12ನೇ ಶತಮಾನದಲ್ಲಿ ಕಲ್ಯಾಣ ನಗರದಲ್ಲಿ ತಿಳಿಸಿದ ಪ್ರಮುಖರಲ್ಲಿ ಬಸವಣ್ಣನವರು ಮೊದಲಿಗರಾ ಗಿದ್ದರು ಎಂಬುದನ್ನು ಈ ವಚನದಲ್ಲಿ ಮಾಚಿದೇವರು ಹೇಳಿದ್ದಾರೆ. ಇದು ಬಸವಣ್ಣನವರೇ ಇಷ್ಟಲಿಂಗದ ಜನಕರು ಎಂಬುದನ್ನು ಪುಷ್ಟೀಕರಿಸುತ್ತದೆ..

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಜಿಗಜಿಣಗಿ ಲಂಬಾಣಿ ಸಮಾಜದ ಅವಹೇಳನ ಮಾಡಿಲ್ಲ :ನಾಯಕ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಂಸದ ರಮೇಶ ಜಿಗಜಿಣಗಿ ಎಂದಿಗೂ ಲಂಬಾಣಿ ಸಮಾಜವನ್ನು ಅವಹೇಳನ ಮಾಡಿಲ್ಲ, ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುತ್ತಾ ನೋಡ್ತಾ ಬಂದವರು. ಲಂಬಾಣಿ ಸಮಾಜದ ವಿರುದ್ಧ ಹೇಳಿಕೆ ನೀಡಿಲ್ಲ, ಕೆಲ ಕಾಂಗ್ರೆಸ್ ಕಿಡಿಗೇಡಿಗಳು ಅಪಪ್ರಚಾರ ಮಾಡಿದ್ದು ಅದರ ಬಗ್ಗೆ ಲಂಬಾಣಿ ಸಮಾಜದ ಮುಖಂಡರು ತಪ್ಪು ಭಾವಿಸಬೇಡಿ ಎಂದು ಬಿಜೆಪಿ ಮುಖಂಡ ಮಹೇಂದ್ರ ನಾಯಕ ಹೇಳಿದರು.

ಲೋಕಸಭಾ ಚುನಾವಣೆ ನಿಮಿತ್ಯ ರೇವತಗಾವ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದ ಎನ್ ಡಿ ಎ ಅಭ್ಯರ್ಥಿಯ ರಮೇಶ ಜಿಗಜಿಣಗಿ ಪರ ಬಹಿರಂಗ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಸಂಜೀವ ಐಹೊಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಗೆ ರಮೇಶ ಜಿಗಜೀವಣಗಿ ಸಾಹೇಬರು 1 ಲಕ್ಷ ಕೋಟಿ ರೂ. ಅನುದಾನ ತಂದು ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ, ಮತ್ತೊಮ್ಮೆ ರಮೇಶ ಜಿಗಜಿಣಗಿರನ್ನು ಲೋಕಸಭೆಗೆ ಕಳುಹಿಸಿ ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿಯನ್ನಾಗಿಸಲು ಮನವಿ ಮಾಡಿದರು.

ಚಿದಾನಂದ ಛಲವಾದಿ ಮಾತನಾಡಿ, ಅಂಬೇಡ್ಕರ್ ತೀರಿಕೊಂಡಾಗ ಅವರ ಅಂತಿಮ ಸಂಸ್ಕಾರಕ್ಕೆ ಜಾಗ ಕೊಡಲಿಲ್ಲ. ಇಂತಹ ನೀಚ ಸರಕಾರಕ್ಕೆ ಮತ ಹಾಕಿದ್ದಲ್ಲಿ ನೀವು ಸತ್ತಂತೆ. ಯಾಕಂದ್ರೆ ಅದೊಂದು



ಸುಡುವ ಮನೆ ಇದ್ದಂತೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ವೇದಿಕ ಮೇಲೆ ಎನ್ ಡಿ ಏ ಅಭ್ಯರ್ಥಿ ರಮೇಶ ಜಿಗಜಿಣಗಿ, ಕಾಂತು ಗೌಡ ಪಾಟೀಲ ಭೀಮು ಸಾಹುಕಾರ ಬಿರಾದಾರ, ಶಂಕರಗೌಡ ಪಾಟೀಲ, ಶ್ರೀಶೈಲಗೌಡ ಬಿರಾದಾರ, ಮಹಾದೇವ ಅಂಕಲಗಿ, ಸುರೇಶ ಗೌಡ ಬಿರಾದಾರ, ಚಂದು ಸಾಹುಕಾರ ಹುನ್ನೂರ ಸುಭಾಸ ಭೈರಗೊಂಡ, ನಾಗು ಭೈರಗೊಂಡ, ಪೀಂಟು ಜಾಬಗೊಂಡೆ, ಶಿವಗೊಂಡ ನಡಗೇರಿ, ಮಹಾದೇವ ಅಂಕಲಗಿ ಸೇ–ರಿದಂತೆ ಹಲವರು ಇದ್ದರು.

ಉಮರಾಜ ಗ್ರಾಮ ಪಂಚಾಯತ ಅಧ್ಯಕ್ಷರು ಕೇವಸಾನ್(ಬುಡ್ಡೆ ಸಾಬ್) ಇಬ್ರಾಹಿಂ ಸಾವಳೇ ಗ್ರಾಪಂ ಉಪಾಧ್ಯಕ್ಷ ಶಿವಾನಂದ ದಾನಪ್ಪ ಇರಮಾನಿ, ಸದಸ್ಯ ಶಿವಯ್ಯ ಚಲಾಕಾಪುರೆ ಸೇರಿದಂತೆ ಹಲವರು ಬಿಜೆಪಿ ಪಕ್ಷ ಸೇರ್ಪಡೆಗೊಂಡರು.

## ಚಿಕ್ಕರೂಗಿಯಲ್ಲಿ ಸಿಡಿಲಿಗೆ 10 ಕುರಿಗಳ ಬಲಿ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಸಿಡಿಲಿನ ಹೊಡೆತಕ್ಕೆ 10 ಕುರಿಗಳು ಬಲಿಯಾಗಿ ಸಾವನ್ನಪ್ಪಿರುವ ಘಟನೆ ಚಿಕ್ಕರೂಗಿ ಗ್ರಾಮದಲ್ಲಿ ಜರುಗಿದೆ.

ತಾಲ್ಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಬುಧವಾರ ಸಾಯಂಕಾಲ ಈ ಘಟನೆ ಜರುಗಿದ್ದು, ಗ್ರಾಮದ ಸುಬ್ರಾಯ್ ನಾಟೀಕಾರ ಎಂಬುವವರಿಗೆ ಸೇರಿದ ಕುರಿಗಳು ಮಳೆ ಬರುವ ಸಂದರ್ಭದಲ್ಲಿ ಮರದ ಕೆಳಗಡೆ ನಿಂತ ಸಂದರ್ಭದಲ್ಲಿ ಸಿಡಿಲಿನ ಹೊಡೆತಕ್ಕೆ ಬಲಿಯಾಗಿವೆ.



ಗ್ರಾಮದಲ್ಲಿ ಒಂದು ಗಂಟೆಗಳ ಕಾಲ ಸುರಿದ ಮಳೆ ಗ್ರಾಮಸ್ಥರಿಗೆ ಒಂದೇಡೆ ಸಂತಸ ತಂದರೆ, ಇನ್ನೊಂದೆಡೆ ಗುಡುಗಿಗೆ ಸುಮಾರು ಅಂದಾಜು 2 ಲಕ್ಷ ಮೌಲ್ಯದ ಕುರಿಗಳು ಜೀವ ಕಳೆದುಕೊಂಡಿದ್ದು ನಿರಾಶೆಯನ್ನುಂಟುಮಾಡಿದೆ.

## ದೇಶ ಸಧೃಡವಾಗಿ ಕಟ್ಟಿದ್ದು ಕಾಂಗ್ರೆಸ್ :ಸಚಿವ ಎಂ.ಬಿ.ಪಾಟೀಲ

**ಉದಯರಶ್ಮಿ ನ್ಯೂಸ್**

ಸಿಂದಗಿ: ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುವ ಜೊತೆಗೆ ಅವರು ಬೆಳೆದ ಬೆಳೆಗೆ ಬೆಂಬಲ ಬೆಲೆ ನೀಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಬುಧವಾರದಂದು ಪಟ್ಟಣದ ಮಾಂಗಲ್ಯ ಭವನದಲ್ಲಿ ವಿಜಯಪುರ ಮೀಸಲು ಕ್ಷೇತ್ರ ಲೋಕಸಭಾ ಚುನಾವಣಾ ನಿಮಿತ್ಯವಾಗಿ ಸಿಂದಗಿ ವಿದಾನಸಭಾ ಮತಕ್ಷೇತ್ರದಲ್ಲಿ ಹಮ್ಮಿಕೊಂಡ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯುವಂತೆ ಮಾಡುತ್ತೇವೆ. ಪ್ರತಿ ವರ್ಷಕ್ಕೆ ಮಹಿಳೆಗೆ 1ಲಕ್ಷ ರೂ. ಕುಟುಂಬದ ಮಹಿಳೆಗೆ ನೀಡುತ್ತೇವೆ. ದೇಶ ಕಟ್ಟಿದ್ದು ಕಾಂಗ್ರೆಸ್. ಜನರಿಗೆ ತಿನ್ನಲೂ ಆಹಾರ ಇಲ್ಲದ ಸಂದರ್ಭದಲ್ಲಿ ನೆಹರೂ, ಲಾಲಬಹದ್ದೂರ್ ಶಾಸ್ತ್ರೀಜಿ ಅವರು ಹಸಿರು ಕ್ರಾಂತಿಯನ್ನು ಮಾಡುವ ಮೂಲಕ ಆಹಾರ ಉತ್ಪಾದನೆ ಮಾಡುವುದಲ್ಲದೇ ವಿದೇಶಕ್ಕೆ ರವಾನೆ ಮಾಡುವ ಶಕ್ತಿ ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಅನೇಕ ಬೃಹತ್ ಕಾರ್ಖಾನೆಗಳನ್ನು ಕಟ್ಟಿ ಉದ್ಯೋಗಗಳನ್ನು ನೀಡಿದೆ. ಕಾಂಗ್ರೆಸ್ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಬಡವರಿಗೆ ಕೈಗೆಟುಕುವ ಬೆಲೆಗೆ ವಸ್ತುಗಳು ದೊರೆಯುತ್ತಿದ್ದವು. ಆದರೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಎಲ್ಲ ಬೆಲೆಗಳು ಮುಗಿಲು ಮುಟ್ಟಿದೆ. ಡಾಲರ್ ಮುಂದೆ ರೂಪಾಯಿ ಮೌಲ್ಯ ಕುಸಿದಿದೆ. ಚುನಾವಣಾ ಬಾಂಡ್ ಖರೀದಿ ವಿಚಾರದಲ್ಲಿ ಮೋದಿಯವರ ಮುಖವಾಡ ಕಳಚಿ ಬಿದ್ದಿದೆ. ಬಿಜೆಪಿ ಸರಕಾರ 7,500ಸಾವಿರ ಕೋಟಿ ಹಣ ಲೂಟಿ ಮಾಡಿದ್ದಾರೆ. ಇದೇ ಅಲ್ಲವೇ ಮೋದಿ ಅವರ ಅಚ್ಛೇದಿನ್ ಎಂದು ಹರಿಹಾಯ್ದರು.




ಈ ವೇಳೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಈ ಚುನಾವಣೆ ನಿಮ್ಮ ಭವಿಷ್ಯದ ಜೊತೆಗೆ ನಮ್ಮ ಭವಿಷ್ಯ ಬರೆಯುವ ಚುನಾವಣೆಯಾಗಿದೆ. ಕರ್ನಾಟಕದಿಂದ ಕೇಂದ್ರಕ್ಕೆ 40ಲಕ್ಷ 30ಸಾವಿರ ಕೋಟಿ ತೆರಿಗೆ ಹೊಗುತ್ತೇ ಆದ–'ರೇ ಬರಗಾಲದ ಸಂದರ್ಭದಲ್ಲಿ ಪರಿಹಾರ ನೀಡಿ ಎಂದು ಕೇಳಿದರೆ ನೀಡಲಿಲ್ಲ. ಕೊನೆಗೆ ನಾವು ಸುಪ್ರೀಂಕೋರ್ಟ್ಗೆ ಹೋಗಬೇಕಾಯಿತು. ಕಾಂಗ್ರೆಸ್ ಪಕ್ಷ ಬಿಜೆಪಿಯ ಹಾಗೇ ಬರಿ ಮಾತು ಹೇಳುವ ಪಕ್ಷವಲ್ಲ ನುಡಿದಂತೆ ನಡೆಯುವ ಪಕ್ಷವಾಗಿದೆ. ಯಾವುದೇ ಆಸೆ, ಸುಳ್ಳಿಗೆ ಮತ ಹಾಕದೇ ಅಭಿವೃದ್ಧಿಯ ಹರಿಕಾರಿಗೆ ಮತ ನೀಡಿ. ಪ್ರೊ.ರಾಜು ಆಲಗೂರ ಅವರಿಗೆ ಮತ ನೀಡಿ. ಪತ್ರಿವರ್ಷ 30ಲಕ್ಷ ಉದ್ಯೋಗ ಸೃಷ್ಠಿ ಮಾಡುವ ಗುರಿಯನ್ನು ಹೊಂದಿದ್ದೇವೆ ಎಂದರು.

ಇದೇ ಸಂದರ್ಭದಲ್ಲಿ ಅಭ್ಯರ್ಥಿ ರಾಜು ಆಲಗೂರ, ಶಾಸಕರಾದ ಯಶವಂತ್ರಾಯಗೌಡ ಪಾಟೀಲ, ಅಶೋಕ ಮನಗೂಳಿ, ಮಾಜಿ ಶಾಸಕ ಶರಣಪ್ಪ ಸುಣಗಾರ, ಜಿಲ್ಲಾಧ್ಯಕ್ಷ ಮಲ್ಲಕಾರ್ಜುನ ಲೋಣಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಸಕ ವಿಠ್ಠಲ ಕಟಕದೊಂಡ, ಕಾಂತಾ ನಾಯಕ, ಎಸ್.ಎಂ.ಪಾಟೀಲ ಗಣಿಹಾರ, ವಿದ್ಯಾರಾಣಿ ತುಂಗಳ, ಬಾಬುರಾಜೇಂದ್ರ ನಾಯಕ್, ಸುರೇಶ ಪೂಜಾರ, ಸಾಧಿಕ್ ಸುಂಬಡ, ಜಯಶ್ರೀ ಹದನೂರ, ಸುನಂದಾ ಯಂಪುರೆ, ಹಣಮಂತ ಸುಣಗಾರ, ಗುರುರಾಜಗೌಡ ಪಾಟೀಲ, ಹಾಸಿಂಪೀರ ಆಳಂದ, ವಾಯ್.ಸಿ.ಮಯೂರ. ಪರಶುರಾಮ ಕಾಂಬಳೆ, ರಮೇಶ ನಡುವೀರಕೇರಿ, ಕುಮಾರ ದೇಸಾಯಿ, ಅರವಿಂದ ಹಂಗರಗಿ, ಅಶೋಕ ವಾರದ, ಚನ್ನು ವಾರದ ಸೇರಿದಂತೆ ಸಾವಿರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

## ಪವಾಡ ಬಸವೇಶ್ವರ ಅದ್ಧೂರಿ ರಥೋತ್ಸವ ಸಂಪನ್ನ



**ಉದಯರಶ್ಮಿ ನ್ಯೂಸ್**

ಢವಳಗಿ: ಸಮೀಪದ ಬಸರಕೋಡ ಗ್ರಾಮದ ಶ್ರೀ ಪವಾಡ ಬಸವೇಶ್ವರರ ಜಾತ್ರಾ ನಿಮಿತ್ತ ಬುಧವಾರದಂದು ಅದ್ದೂರಿಯಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ಜರುಗಿತು.

ನಿಡಗುಂದಿ ಗ್ರಾಮದಿಂದ ತೇರಿನ ಕಳಸ ಮತ್ತು ಬೆಳ್ಳಿಯ ಛತ್ರಿ ಆಗಮನ, ಕಾಶಿನಕುಂಟಿ ಗ್ರಾಮದಿಂದ ಪಲ್ಲಕ್ಕಿ ಆಗಮನ ಮತ್ತು ರೂಡಗಿ ಗ್ರಾಮದಿಂದ ತೇರಿನ ಮಣಿಯನ್ನು ಮೆರವಣಿಗೆಯ ಮುಖಾಂತರ ಸ್ವಾಗತಿಸಿಕೊಳ್ಳಲಾಯಿತು. ಮೂರು ಲಿಂಗದ ದೇವಸ್ಥಾನದಿಂದ ಪವಾಡ ಬಸವೇಶ್ವರರ ದೇವಸ್ಥಾನದವರೆಗೆ ಕಲಶದ ಮೆರವಣಿಗೆ ನಡೆಯಿತು. ಸಂಜೆ ರಥದ ಶಿಖರಕ್ಕೆ ಕಲಶ ಎರಿಸಿದ ನಂತರ ಬಳಿಕ ಮಹಾ ರಥೋತ್ಸವ ನೆರವೇರಿತು.

ಮುದ್ದೇಬಿಹಾಳ ಮತಕ್ಷೇತ್ರದ ಶಾಸಕರಾದ ಸಿ ಎಸ್ ನಾಡಗೌಡ ಮತ್ತು ದೇವಸ್ಥಾನದ ಕಮೀಟಿ ಅಧ್ಯಕ್ಷರಾದ ಕೆ ವಾಯ್ ಬಿರಾದಾರ, ಮತ್ತು ಜಾತ್ರಾ ಕಮೀಟಿ ಅಧ್ಯಕ್ಷರಾದ ಶ್ರೀಶೈಲ ಸೂಳಿಭಾವಿ ಹಾಗೂ ರೂಡಗಿ ಗ್ರಾಮದ ಶ್ರೀ ಯಲ್ಲಾಲಿಂಗ ಮಹಾರಾಜರು ಬುಧವಾರ ಸಂಜೆ 5–50 ನಿಮಿಷಕ್ಕೆ ರಥೋತ್ಸವಕ್ಕೆ ಚಾಲನೆ ನೀಡಿದರು.ಭಕ್ತರು ರಥೋತ್ಸವಕ್ಕೆ ಬಾಳೆಹಣ್ಣು, ಉತ್ತತ್ತಿ ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ಮಹಾರಥೋತ್ಸವವು ಯಾವುದೇ ಅಡ್ಡಿ ಆತಂಕಗಳು ಇಲ್ಲದೆ ಪಾದಗಟ್ಟಿಯವರೆಗೆ ಹೋಗಿಬಂದಿತು.

# ಪ್ರಥಮರು ಎನ್ನಿಸಿಕೊಂಡ ಮಹಾತ್ಮರನ್ನು ನೆನೆಯೋಣ :ವಡಿಗೇರಿ

**ಉದಯರಶ್ಮಿ ನ್ಯೂಸ್**

ಕೆಂಭಾವಿ: ಬದುಕಿನುದ್ದಕ್ಕೂ ಸಮಾಜದ ಶ್ರೇಯೋಭಿವೃದ್ಧಿಗೆ ಜೀವನ ಮುಡಿಪಾಗಿಟ್ಟ ಲೋಕ ಕಲ್ಯಾಣಕ್ಕೆ ಕಳಸ ಪ್ರಾಯರಾಗಿ ಪ್ರಥಮರಲ್ಲಿ ಪ್ರಥಮರು ಎನ್ನಿಸಿಕೊಂಡ ಮಹಾತ್ಮರನ್ನು ನೆನೆಯೋಣ ಎಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಂಗೀತ ಶಿಕ್ಷಕ ಮಲ್ಲಯ್ಯ ಸ್ವಾಮಿ ವಡಿಗೇರಿ ಹೇಳಿದರು.



ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶ್ರೀ ಗುರು ಕಾಂತೇಶ್ವರ ಜನ ಕಲ್ಯಾಣ ಸೇವಾ ಪ್ರತಿಷ್ಠಾನದ ವತಿಯಿಂದ ಮಂಗಳವಾರ ಜರುಗಿದ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿಯನ್ನು ಉದ್ಘಾಟಿಸಿ ಉಪನ್ಯಾಸ ನೀಡಿದ ಅವರು ಮಾನವ ಹಕ್ಕಿಯಂತೆ ಹಾರಾಡುವುದು, ಮೀನಿನಂತೆ ಈಜುವುದು, ಪ್ರಾಣಿಗಳಂತೆ ಓಡಾಡುವುದು ಕಲಿತರು ಸುಖ ಶಾಂತಿಯಿಲ್ಲ. ಆ ನೆಮ್ಮದಿಯ ಸುಖ ಶಾಂತಿಯ ಬದುಕು ನಮ್ಮದಾಗಲು ಸಾಧು ಸಂತರು, ಮಹಾಂತರು ನಿತ್ಯವೂ ಸ್ಮರಣೀಯರು. ಇಂದು ಹನುಮ ಜಯಂತಿ, ಅಕ್ಕಮಹಾದೇವಿ ಜಯಂತಿ, ಹಾಗೂ ಗೊಲಗೇರಿ ಗೋಲ್ಲಾಳೇಶರ ರಥೋತ್ಸವ ಇಂತಹ ಪವಿತ್ರ ದಿನದಂದು ಸತ್ಸಂಗದಲ್ಲಿ ಭಾಗಿಯಾಗಿರುವ ನಾವು ನೀವುಗಳು ಪುಣ್ಯವಂತರು ಎಂದರು.

ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಯಮನೇಶ ಯಾಳಗಿ, ಶರಣಕುಮಾರ ಯಾಳಗಿ, ಸೋಮನಾಥ ಯಾಳಗಿ, ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು.

ಡಾ ಯಂಕನಗೌಡ ಎಸ್ ಪಾಟೀಲ ನಿರೂಪಿಸಿ ವಂದಿಸಿದರು, ಪ್ರಮುಖರಾದ ನಿಂಗನಗೌಡ ದೇಸಾಯಿ ಅಭಿಷೇಕ್ ಪಾಟೀಲ ಸೇರಿದಂತೆ ಅನೇಕ ಸದ್ಭಕ್ತರು ಮಹಿಳೆಯರು ಮಕ್ಕಳು ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

## ಸಿಂದಗಿಯಲ್ಲಿ ಬಿಜೆಪಿ ರೋಡ್ ಶೋ & ಬಹಿರಂಗ ಸಭೆಯಲ್ಲಿ ಶಾಸಕ ಬಸನಗೌಡ ಯತ್ನಾಳ ಸವಾಲು

# ಮೋದಿ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿದರೆ ರಾಜಕೀಯ ನಿವೃತ್ತಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ಮೋದಿಯವರ ಮೇಲೆ ಒಂದೇ ಒಂದು ಭ್ರಷ್ಟಾಚಾರದ ಆರೋಪ ಕಾಂಗ್ರೆಸ್ ಮಾಡಿ ತೋರಿಸಲಿ, ನಾನು ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದು ಕಾಂಗ್ರೆಸ್ಸಿಗರ ಮೇಲೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸವಾಲು ಎಸೆದರು.



ಪಟ್ಟಣದ ಸ್ವಾಮಿ ವಿವೇಕಾನಂದ ವೃತ್ತದಲ್ಲಿ ವಿಜಯಪುರ ಲೋಕಸಭಾ ಚುನಾವಣೆ ಪ್ರಚಾರದ ಪ್ರಯುಕ್ತವಾಗಿ ಹಮ್ಮಿಕೊಂಡ ರೋಡ್ ಶೋ ಹಾಗೂ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನವರು ಹೇಳುತ್ತಾರೆ ಬಿಜೆಪಿ ಚೆಂಬು ಕೊಟ್ಟಿದ್ದಾರೆ ಎಂದು ಆದರೆ 10ವರ್ಷದಲ್ಲಿ ಭಾರತಕ್ಕೆ ಮೋದಿಯವರು ಅಕ್ಷಯ ಪಾತ್ರೆಯನ್ನು ನೀಡಿದ್ದಾರೆ. ಕರೋನಾ ಲಸಿಕೆ ನಮ್ಮವರಿಗಲ್ಲದೇ ಹೊರಗಿನವರಿಗೂ ಮಾನವೀಯತೆಯ ದೃಷ್ಟಿಯಿಂದ ಕೊಟ್ಟಿದ್ದೇವೆ. ಜನಧನ ಯೋಜನೆಯಿಂದ ರೈತರ ಖಾತೆಗೆ ಹಣ ನೇರವಾಗಿ ಜಮಾವಾಗುತ್ತದೆ. ಆದರೆ ರಾಜೀವ ಗಾಂಧಿ ಪ್ರಧಾನಮಂತ್ರಿ ಇದ್ದಾಗ ದೆಹಲಿಯಿಂದ 100 ಹೊರಟರೆ ನಮಗೆ ಬಂದು ತಲುಪಬೇಕಾದರೆ 10ರೂ. ಬಂದು ತಲುಪುತಿತ್ತು. ಮೋದಿಯವರು ಬಂದ ಕಾರಣ ಡಿಜಿಟಲ್ ಇಂಡಿಯಾ ಸಹಕಾರಿಯಾಗಿದೆ. ಯಾರ ಮುಖ ನೋಡಿ ಮತ ಹಾಕಬೇಡಿ ನಮ್ಮ ಮನೆ, ನಮ್ಮ ದೇಶ, ಸನಾತನ ಹಿಂದೂ ಧರ್ಮ ಉಳಿಸಲು ಬಿಜೆಪಿಗೆ ಮತ ಚಲಾಯಿಸಿ ಎಂದರು.

ಬಿಜೆಪಿಯವರು ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಹೇಳುವ ಕಾಂಗ್ರೆಸ್‌ನವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಅಂತ್ಯಕಿಯೆಗೆ ದಿಲ್ಲಿಯಲ್ಲಿ ಒಂದು ಎಕರೆ ಜಮೀನು ನೀಡಲಿಲ್ಲ. ಆದರೆ ನೆಹರೂಗೆ 70ಎಕರೆ, ಇಂದೀರಾ ಗಾಂದಿಗೆ 39ಎಕರೆ, ರಾಜೀವ ಗಾಂದಿಗೆ 23ಎಕರೆ, ಸಂಜಯ ಗಾಂದಿ 18ಎಕರೆ ಅಂತ್ಯಕ್ರಿಯೆಗೆ ನೀಡಿದ್ದಾರೆ. ಅಂಬೇಡ್ಕರ್ ಅವರ ಹೆಸರಿನಲ್ಲಿ ಮೋದಿಯವರು ಪಂಚತೀರ್ಥ ಎಂದು ಮಾಡಿದ್ದಾರೆ. ಬಿಜೆಪಿ ಸರಕಾರ ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎಂದರು.

ದೇಶದಲ್ಲಿ ಮುಸ್ಲಿಂರ ಮೀಸಲಾತಿ ತೆಗೆದುಹಾಕಿ ಎಸ್.ಸಿ/ಎಸ್.ಟಿ ಹಿಂದುಳಿದವರಿಗೆ ನೀಡುತ್ತೇವೆ. 10ಲಕ್ಷ ರೂ.ಮೌಲ್ಯದ ಬಟ್ಟೆ ಹಾಕಿಕೊಳ್ಳುತ್ತಾರೆ ಮೋದಿ ಎಂದು ಹೇಳುತ್ತಾರೆ. ಅಮೇರಿಕಾ, ಜರ್ಮನ, ಜಪಾನಗೆ ತೆರಳಿದಾಗ ರಾಹುಲ್ ಗಾಂದಿ ಹಾಗೆ ಹರಿದ ಅಂಗಿ ಹಾಕಿಕೊಳ್ಳಬೇಕೆ ಎಂದು ವ್ಯಂಗ್ಯವಾಡಿದರು.

ಈ ವೇಳೆ ಅಭ್ಯರ್ಥಿ ರಮೇಶ ಜಿಗಜಿಣಗಿ ಮಾತನಾಡಿ, ದೇಶದ ಉದ್ದಕ್ಕಲಕ್ಕೂ ಮೋದಿಯವರು ಮಾಡಿರುವ ಅಬಿವೃದ್ಧಿ ಮತ್ತು ವಿಜಯಪುರಕ್ಕೂ ಮಾಡಿರುವ ಅಭಿವೃದ್ಧಿ ಕಾರ್ಯ ನೋಡಿದ್ದೀರಿ. ಈ ದೇಶ ಉಳಿಯಬೇಕಾದರೆ ಮೋದಿ ಅನಿವಾರ್ಯ. ಮತ್ತೊಮ್ಮೆ ಮೋದಿ ಅವರನ್ನು ಪ್ರದಾನಿಯನ್ನಾಗಿ ಮಾಡಲು ನನಗೆ ಮತ ನೀಡಿ ಎಂದರು.

ರೈತರು ರೂ.5ಲಕ್ಷಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. 2–3ವರ್ಷಕೊಮ್ಮೆ ಬರಗಾಲ ಬೀಳಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಹುಬ್ಬಳಿಯಲ್ಲಿ ನಡೆದಿರುವುದು ಆಕಸ್ಮಿಕ ಘಟನೆ ಎಂದು ಸಚಿವ ಶಿವಾನಂದ ಪಾಟೀಲ ಹೇಳುತ್ತಾರೆ. ಅದೇ ಅವರ ಮಗಳಿಗಾಗಿದ್ದರೇ ಆಕಸ್ಮಿಕ ಎಂದು ಹೇಳುತ್ತಿದ್ದರೇ ಎಂದು ಅವರ ವಿರುದ್ಧ ಶಾಸಕ ಯತ್ನಾಳ ಕಿಡಿಕಾರಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ರಮೇಶ ಭೂಸನೂರ, ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ಮಾಜಿ ವಿಪ ಸದಸ್ಯ ಅರುಣ ಶಹಾಪುರ, ಮಂಡಲ ತಾಲೂಕಾಧ್ಯಕ್ಷ ಸಂತೋಷ ಪಾಟೀಲ ಡಂಬಳ, ಜೆಡಿಎಸ್ ತಾಲೂಕಾಧ್ಯಕ್ಷ ಎಮ್.ಎನ್.ಪಾಟೀಲ, ಶಿಲ್ಪಾ ಕುದರಗೊಂಡ, ಈರಣ್ಣ ರಾವೂರ, ರವಿಕಾಂತ ನಾಯ್ಕೋಡಿ, ಸಾಯಬಣ್ಣ ದೇವರಮನಿ, ಸಿದ್ದು ತಮದೊಡ್ಡಿ, ಪ್ರಶಾಂತ ಕದ್ದರಕಿ, ನಿತ್ಯಾನಂದ ಕಟ್ಟಿಮನಿ, ಎಸ್.ಆರ್.ಪಾಟೀಲ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಪದಾಧಿಕಾರಿಗಳು ಇದ್ದರು.

## ವಿಜಯಪುರದಲ್ಲಿ ಕಾಲ್ನಡಿಗೆ ಜಾಥಾ ಮೂಲಕ ಮತದಾನ ಜಾಗೃತಿ

# ಪ್ರಜಾಪ್ರಭುತ್ವ ಬಲಪಡಿಸಲು ಯುವ ಮತದಾರರಿಗೆ ಡಿಸಿ ಭೂಬಾಲನ್ ಕರೆ

**ಉದಯರಶ್ಮಿ ನ್ಯೂಸ್**




ವಿಜಯಪುರ: ಈ ಬಾರಿ ಯುವ ಮತದಾರರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಮೊಟ್ಟ ಮೊದಲ ಬಾರಿಗೆ ಮತದಾನ ಮಾಡುವವರು ತಪ್ಪದೇ ತಮ್ಮ ಹಕ್ಕನ್ನು ಚಲಾಯಿಸಿ, ಕರ್ತವ್ಯವನ್ನು ನಿಭಾಯಿಸಿ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು. ಜವಾಬ್ದಾರಿಯುತವಾಗಿ ಸೂಕ್ತ ಅಭ್ಯರ್ಥಿಯನ್ನು ಆರಿಸಿ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕಾರಣಿಭೂತರಾಗಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಾದ ಟಿ. ಭೂಬಾಲನ್ ಹೇಳಿದರು.

ಬುಧವಾರ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಲೋಕಸಭಾ ಚುನಾವಣೆ–2024ರ ಪ್ರಯುಕ್ತ ಮತದಾನ ಜಾಗೃತಿಗಾಗಿ ವಿಜಯಪುರ ಜಿಲ್ಲಾ ಪಂಚಾಯತಿಯ ಆಟದ ಮೈದಾನದಿಂದ ಹಮ್ಮಿಕೊಂಡ ಕಾಲ್ನಡಿಗೆ ಜಾಗೃತಿ ಜಾಥಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯುವಕರು ಒಂದು ದೇಶದ ಶಕ್ತಿಯಾಗಿ ರೂಪುಗೊಂಡಾಗ ಆಡಳಿತ ವ್ಯವಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ. ಚಾಚುತಪ್ಪದೇ ಮತದಾನ ಮಾಡಬೇಕು ಹಾಗೂ ನೆರೆಹೊರೆಯವರಿಗೆ ಮತದಾನದ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಋಷಿಕೇಶ ಸೊನಾವಣೆ, ವಿಜಯಪುರ ಮೀಸಲು ಮತಕ್ಷೇತ್ರದ ಚುನಾವಣಾ ವೀಕ್ಷಕರಾದ ಡಾ. ರತನ್ ಕನ್ವರ್ ಹೆಚ್. ಗಧವಿಚರಣ, ಇನ್ಪೋರ್ವ ವೀಕ್ಷಕರಾದ ಅನೂಪಕುಮಾರ, ಮಹಾನಗರ ಪಾಲಿಕೆ ಆಯುಕ್ತರಾದ ಅಶಾದ ಉರ್ ರೆಹಮಾನ್ ಶರೀಫ ರವರು ಹಸಿರು ನಿಶಾನೆ ತೋರಿಸಿ ಬಲೂನ್ ಗಳನ್ನು ಹಾರಿ ಬಿಡುವುದರ ಮೂಲಕ ಚಾಲನೆ ನೀಡಿದರು.

ಕಾಲ್ನಡಿಗೆ ಜಾಥಾ ಕಾರ್ಯಕ್ರಮವು ವಿಜಯಪುರ ಜಿಲ್ಲೆಯ ಎಲ್ಲ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು, ಕಾಲೇಜುಗಳ ವಿದ್ಯಾರ್ಥಿಗಳು, ವಸತಿ ನಿಲಯದ ವಿದ್ಯಾರ್ಥಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು, ಕ್ರೀಡಾ ಇಲಾಖೆಯ ಕ್ರೀಡಾಪಟುಗಳು ಸೇರಿದಂತೆ ಸುಮಾರು 3000 ಕ್ಕಿಂತ ಹೆಚ್ಚು ಜನರಿಂದ ವಿಜಯಪುರ ಜಿಲ್ಲಾ ಪಂಚಾಯತಿಯ ಆಟದ ಮೈದಾನದಿಂದ ಆರಂಭಗೊಂಡು ಗೋಳಗುಮ್ಮಟದವರೆಗೆ ಸಾಗಿತು.

ಗೋಳಗುಮ್ಮಟದ ಆವರಣದಲ್ಲಿ ಮತದಾನ ಜಾಗೃತಿ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ, ಮತದಾನ ಅಮೂಲ್ಯವಾದದ್ದು ಹಾಗೂ ಪವಿತ್ರವಾದದ್ದು, ಆದ್ದರಿಂದ ಸಮಾಜಕ್ಕಾಗಿ, ದೇಶಕ್ಕಾಗಿ ಕಡ್ಡಾಯವಾಗಿ ಮತ ಚಲಾಯಿಸಿ ದೇಶದ ಅಭಿವೃದ್ಧಿಗೆ ಕಾರಣಿಭೂತರಾಗಿ ಎಂದು ಹೇಳಿದರು.

ಜಿಲ್ಲಾ ಪಂಚಾಯತಿಯ ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿಗಳಾದ ಎ. ಬಿ. ಅಲ್ಲಾಪೂರ ರವರು ಮತದಾನ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸ್ವೀಪ್ ಸಮಿತಿಯ ನೊಡೆಲ್ ಅಧಿಕಾರಿಗಳಾದ ಸಿ. ಆರ್. ಮುಂಡರಗಿ, ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಬಿ.ಎಸ್. ಮೂಗನೂರಮಠ, ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಗಳಾದ ನಿಂಗಪ್ಪ ಗೋಠೆ, ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳಾದ ರಾಮಣ್ಣ ಅಥಣಿ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಮಹಾವೀರ ಬೋರಣ್ಣವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಕೆ. ಕೆ. ಚವ್ಹಾಣ, ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಸಿ. ಬಿ. ಕುಂಬಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ತುಂಬರಮಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಪುಂಡಲೀಕ ಮಾನವರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ರಾಜಶೇಖರ್ ಹೆಚ್. ದೈವಾಡಿ, ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ಹೊಂಗಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಎಸ್, ಜಿ ಲೋಣಿ, ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಪ್ರಶಾಂತ ಪೂಜಾರಿ, ಜಿಲ್ಲಾ ಎನ್. ಎಸ್.ಎಸ್ ಘಟಕದ ನೊಡೆಲ್ ಅಧಿಕಾರಿಗಳಾದ ಪ್ರಕಾಶ ರಾಠೋಡ, ನೆಹರೂ ಯುವ ಕೇಂದ್ರದ ರಾಹುಲ್ ಡೊಂಗ್ರೆ, ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿಗಳಾದ ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿ ಸಾಕ್ಷಿ ಹಿರೇಮಠ, ರಾಜೇಶ ಪವಾರ, ಸಹನಾ ಕುಡಿಗನೂರ ಹಾಗೂ ಎಲ್ಲ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿಯವರು ಹಾಗೂ ಇತರರು ಉಪಸ್ಥಿತರಿದ್ದರು.

# ಏ.26–27ಕ್ಕೆ ಬಿಎಲ್ಡಿಇ ನರ್ಸಿಂಗ್ ಕಾಲೇಜಿನಲ್ಲಿ ಸಮ್ಮೇಳನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಮುದಾಯ ಆರೋಗ್ಯ ನರ್ಸಿಂಗ್ನಲ್ಲಿ ಕ್ರಾಂತಿ ಮತ್ತು ಹೊಸ ದೃಷ್ಟಿಕೋನ: ಶಿಕ್ಷಣ, ಕೌಶಲ್ಯ ಮತ್ತು ಸಂಶೋಧನೆ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಏಪ್ರಿಲ್ 26 ಮತ್ತು 27 ರಂದು ನಗರದ ಬಿ. ಎಲ್. ಡಿ. ಇ ಸಂಸ್ಥೆಯ ಶ್ರೀ ಬಿ. ಎಂ. ಪಾಟೀಲ ನರ್ಸಿಂಗ್ ಕಾಲೇಜಿನಲ್ಲಿ ನಡೆಯಲಿದೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಎಂದು ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಶಾಲ್ಮನ್ ಚೋಪಡೆ, ಸಮ್ಮೇಳನ ಸಂಘಟನೆ ಅಧ್ಯಕ್ಷೆ ಡಾ. ಸುಚಿತ್ರಾ ರಾತಿ, ಏ. 26 ರಂದು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೇ ಕೇಂದ್ರದ ಗ್ರಂಥಾಲಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗಲಿದೆ. ಈ ಸಮ್ಮೇಳನವನ್ನು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದ್ದಾರೆ

ಈ ಸಂದರ್ಭದಲ್ಲಿ ರಾಜ್ಯ ಡಿಪ್ಲೊಮಾ ಇನ್ ನರ್ಸಿಂಗ್ ಪರೀಕ್ಷಾ ಮಂಡಳಿ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ, ಆರ್ಜಿಯುಎಚ್‌ಎಸ್ ಸೆನೆಟ್ ಸದಸ್ಯ ಸೋಮಶೇಖರಯ್ಯ ಕಲ್ಮಠ, ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಡಾ. ರಾಜೇಶ ಎಂ. ಹೊನ್ನುಟಗಿ, ಸೋಚನಿ ಅಧ್ಯಕ್ಷೆ ಡಾ. ಚೆಲ್ಲಾರಾಣಿ ವಿಜಯಕುಮಾರ, ಕಾರ್ಯದರ್ಶಿ ಡಾ. ಶಾಂಡ್ರಿಲಾ ಇಮ್ಯಾನುಯೆಲ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ಬಿ. ಎಲ್. ಡಿ. ಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಆರ್. ಬಿ. ಕೊಟ್ನಾಳ ಉಪಸ್ಥಿತರಿರಲಿದ್ದಾರೆ.

ಬಿ.ಎಲ್.ಡಿ.ಇ ನರ್ಸಿಂಗ್ ಕಾಲೇಜು, ಸೊಸೈಟಿ ಆಫ್ ಕಮ್ಯುನಿಟಿ ಹೆಲ್ತ್ ನರ್ಸ್ ಆಫ್ ಇಂಡಿಯಾ ಸಹಯೋಗದಲ್ಲಿ ಈ ಸಮ್ಮೇಳನ ನಡೆಯಲಿದೆ. ಸಮುದಾಯ ಆರೋಗ್ಯ ಶುಶ್ರೂಷೆಯಲ್ಲಿ ಕ್ರಾಂತಿ ಮತ್ತು ಹೊಸ ದೃಷ್ಟಿಕೋನ: ಶಿಕ್ಷಣ, ಕೌಶಲ್ಯ ಮತ್ತು ಸಂಶೋಧನೆ' ಕುರಿತು ಅಂತರರಾಷ್ಟ್ರೀಯ ಸಮ್ಮೇಳನದ ಗುರಿಯು ಸಮುದಾಯ ಆರೋಗ್ಯ ವೃತ್ತಿಪರರಲ್ಲಿ ಸಂಶೋಧನಾ ಚಟುವಟಿಕೆ ಮತ್ತು ಆವಿಷ್ಕಾರವನ್ನು ಉತ್ತೇಜಿಸುವುದು, ಸಹಾಯ ಮಾಡುವುದು ಮತ್ತು ಅಭಿವೃದ್ಧಿಪಡಿಸುವುದು, ಸಾರ್ವಜನಿಕ ಆರೋಗ್ಯದಲ್ಲಿ ವೃತ್ತಿಪರ ಮಾರ್ಗಗಳನ್ನು ಅಂಗೀಕರಿಸಿ. ಸಾರ್ವಜನಿಕ ಆರೋಗ್ಯದಲ್ಲಿ ಕೃತಕ ಬುದ್ಧಿಮತ್ತೆಯ ಮಹತ್ವವನ್ನು ಗುರುತಿಸಿ, ಜಾಗತಿಕ ದೃಷ್ಟಿಕೋನಗಳು, ದಾದಿಯರ ಮೇಲೆ ಡಿಜಿಟಲ್ ನರ್ಸಿಂಗ್ನ ಜಾಗತಿಕ ದೃಷ್ಟಿಕೋನ ಮತ್ತು ಪ್ರಭಾವ, ಸಾರ್ವಜನಿಕ ಆರೋಗ್ಯಕ್ಕಾಗಿ ಜಾಗತಿಕ ಕ್ರಿಯಾ ಯೋಜನೆಯನ್ನು ಗುರುತಿಸಿ ಯುನಿವರ್ಸಲ್ ಹೆಲ್ತ್ ಕವರೇಜ್ನಲ್ಲಿ ಸಿಎಚ್‌ಎನ್ ಗಳ ಪಾತ್ರವನ್ನು ಅರ್ಥಮಾಡಿಕೊಳ್ಳುವುದು. ಸಾರ್ವಜನಿಕ ಆರೋಗ್ಯದಲ್ಲಿ ಪುರಾವೆಗಳನ್ನು ಅನ್ವೇಷಿಸಿ ಮತ್ತು ಬಹುಶಿಸ್ತಿನ ವಿಧಾನವನ್ನು ಸಂಯೋಜಿಸಿ, ಡಿಜಿಟಲ್ ನರ್ಸಿಂಗ್ ಅನ್ವೇಷಿಸಲು, ಹವಾಮಾನ ಬದಲಾವಣೆ ಮತ್ತು ಆರೋಗ್ಯಕ್ಕೆ ದಾದಿಯರ ಕೊಡುಗೆ ಕುರಿತು ವಿಚಾರ ಗೋಷ್ಠಿಗಳು ನಡೆಯಲಿವೆ.

ಸಾಕ್ಷ್ಯಾಧಾರಿತ ಸಂಶೋಧನೆ ಪ್ರಸ್ತುತಿಗಳ ವಿನಿಮಯದಿಂದ ಕಲಿಯಲು ಸುಮಾರು 600 ಜಾಗತಿಕ ಮತ್ತು ರಾಷ್ಟ್ರೀಯ ನರ್ಸ್ ಸಂಶೋಧಕರು, ವಿದ್ಯಾರ್ಥಿಗಳು, ವೈದ್ಯರು ಮತ್ತು ನಾಯಕರು ಈ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಕೆರಿಬಿಯನ್ ದೇಶವಾದ ಟ್ರಿನಿಡಾಡ್ ಮತ್ತು ಟೊಬಾಗೋ ಮತ್ತು ಮಧ್ಯಪ್ರಾಚ್ಯ ದೇಶ, ಓಮನ್ನಿಂದ ಪ್ರತಿನಿಧಿಗಳು ಆಗಮಿಸುತ್ತಿದ್ದಾರೆ. ರಾಷ್ಟ್ರೀಯ ನರ್ಸ್ ನಾಯಕರು ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ(ಭೋಪಾಲ. ಇಂದೋರ), ಗುಜರಾತ, ರಾಜಸ್ಥಾನ ಮತ್ತು ಕರ್ನಾಟಕದ ಹೆಚ್ಚಿನ ಜಿಲ್ಲೆಗಳಿಂದ ಪ್ರತಿನಿಧಿಸುತ್ತಿದ್ದಾರೆ.

ಸೊಸೈಟಿ ಆಫ್ ಕಮ್ಯುನಿಟಿ ಹೆಲ್ತ್ ನರ್ಸ್ ಆಫ್ ಇಂಡಿಯಾ ಮತ್ತು ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ಸಹಯೋಗದೊಂದಿಗೆ ಈ ಅಂತರರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ಬಿ.ಎಲ್.ಡಿ.ಇ ಡೀಮ್ಡ್ ಯೂನಿವರ್ಸಿಟಿಯೂ ಸಹಯೋಗ ನೀಡುತ್ತಿದೆ ಎಂದು ಅವರು ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

# ರೋಗಿಗಳೊಂದಿಗೆ ಸೌಜನ್ಯದಿಂದ ಮಾತನಾಡಿ :ಸಿಇಓ ರಿಶಿ ಆನಂದ್

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಿ, ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡುವ ಮೂಲಕ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಶಿ ಆನಂದ್ ಹೇಳಿದರು.

ತಾಲೂಕಿನ ಕೂಡಗಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿದರು. ಆಸ್ಪತ್ರೆಗೆ ಬರುವ ರೋಗಿಗಳನ್ನು ಸೌಜನ್ಯದಿಂದ ಮಾತನಾಡಿ ಉತ್ತಮ ವೈದ್ಯಕೀಯ ಉಪಚಾರ ನೀಡುವ ಮೂಲಕ ಸಾರ್ವಜನಿಕರಿಗೆ ಯಾವುದೇ ತೊಂದರೆಗಳಾಗದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ನಂತರ ಆಸ್ಪತ್ರೆಯ ಚುಚ್ಚುವಿಕೆ ಕೊಠಡಿ, ಔಷಧಿ ಸಂಗ್ರಾಹಣೆ ಕೊಠಡಿ, ಒಳ ರೋಗಿಗಳ ಕೊಠಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಇದೇ ವೇಳೆ ಆಸ್ಪತ್ರೆಯ ಇಲ್ಲಾ ವಿಭಾಗಗಳಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯೀಕರಣ ಕಾಪಾಡಿಕೊಳ್ಳಬೇಕು. ಕಡ್ಡಾಯವಾಗಿ ಪ್ರತಿದಿನ ಆಸ್ಪತ್ರೆಯ ಇಲ್ಲಾ ವಿಭಾಗಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಅಲ್ಲಿನ ವೈದ್ಯಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿದರು. ಆರೋಗ್ಯ ತಪಾಸಣೆಗಾಗಿ ಬಂದ ಸಾರ್ವಜನಿಕರೊಂದಿಗೆ ಮಾತಾಡಿ ಅವರೊಂದಿಗೆ ಇಲ್ಲಿನ ವೈದ್ಯಕೀಯ ಗುಣಮಟ್ಟ ಯಾವ ತರನಾಗಿ ಇದೆ ಎಂಬುದು ತಿಳಿದುಕೊಂಡು ಬಂದಂತಹ ರೋಗಿಗಳಿಗೆ ಸರಕಾರಿ ಆಸ್ಪತ್ರೆಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಬಂದು ಆರೋಗ್ಯ ತಪಾಸಣೆ ಮಾಡಿಕೊಳ್ಳಲು ತಿಳಿಸಿದರು.



ನಂತರ ಶಂಕರನಗರದಲ್ಲಿರುವ 108–109 ವಿಶೇಷ ಮತಗಟ್ಟೆಗಳಿಗೆ ಭೇಟಿ ನೀಡಿ ಆ ಮತಗಟ್ಟೆಯ ಕಟ್ಟಡ ದುರಸ್ತಿ, ನೀರಿನ ಸೌಲಭ್ಯ, ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ , ಖಚಿಟರಿ, ಇಟಜಭಿಣಡುಭಿ– ಣಥಿ, ಗಳನ್ನು ಪರಿಶೀಲಿಸಿದರು. ಮುಂದೆ ಸರಕಾರಿ ಪ್ರಾಥಮಿಕ ಶಾಲೆಯ ಬಿಸಿಯೂಟ ಕೋಣೆಗೆ ಭೇಟಿ ಮಾಡಿ ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರಗಳ ವಿತರಣೆ ಬಗ್ಗೆ ಪರಿಸಿಲೀಸಿ ಮಕ್ಕಳೊಂದಿಗೆ ಆಹಾರ ನೀಡುತ್ತಿರುವ ಬಗ್ಗೆ ಅವರಿಂದ ತಿಳಿದುಕೊಂಡು ಅಲ್ಲಿನ ಸಿಬ್ಬಂದಿಗಳಿಗೆ ಸರಿಯಾದ ಸಮಯಕ್ಕೆ ಎಲ್ಲಾ ಮಕ್ಕಳಿಗೆ ಊಟ ಮಾಡಿಸಬೇಕೆಂದು ತಿಳಿಸಿದರು. ಮುಂದುವರೆದು ನರೇಗಾ, ಖಃಒ, ಕುಡಿಯುವ ನೀರಿನ ಸಮಸ್ಯೆ, ಇತರೆ ವಿಷಯಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ರವಿಕುಮಾರ ಹಕ್ಕೆರಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯಿತಿ ಕೊಲ್ಹಾರ ರವರು, ಅರುಣಕುಮಾರ ದಳವಾಯಿ ಸಹಾಯಕ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತ ವಿಜಯಪುರ ರವರು , ಪ್ರಾಥಮಿಕ ಆರೋಗ್ಯ ಕೇಂದ್ರದ ಡಿ.ಪಿ.ಗೊವಿಂದರಾಜು ವೈದ್ಯಾಧಿಕಾರಿಗಳು, ಅಶ್ವನಿ ತುಂಬರಮಟಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಆನಂದ ಕೊಟ್ಯಾಳ, ಹಾಗೂ ತಾಂತ್ರಿಕ ಸಂಯೋಜಕರು, ಐ.ಇ.ಸಿ ಸಂಯೋಜಕರು, ತಾಂತ್ರಿಕ ಸಹಾಯಕರು, ಬಿ.ಎಪ್.ಟಿ ಗಳು ಮತ್ತು ಗ್ರಾಮ ಪಂಚಾಯಿತಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಲೀಲಾ ಗುರುರಾಜ್‌ಗೆ ಸಾಧನ ಶ್ರೀ ಪ್ರಶಸ್ತಿ

**ಉದಯರಶ್ಮಿ ನ್ಯೂಸ್**



ಮಂಗಳೂರು: ಮಂಗಳೂರಿನ ಕಥಾಬಿಂದು ಪ್ರಕಾಶನ ಮತ್ತು ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರ ಮತ್ತು ಶ್ರೀ ಸಾಹಿತ್ಯ ಕಲಾ ವೇದಿಕೆ ಈ ಸಂಸ್ಥೆಗಳ ಜಂಟಿ ಆಶಯದಲ್ಲಿ ಮೇ 5 ರಂದು ಹೈದರಾಬಾದಿನಲ್ಲಿ ಕಥಾ ಬಿಂದು ಕನ್ನಡ ಕಂಪು ಸರಣಿ –6 ಕಾರ್ಯಕ್ರಮ ಆಯೋಜಿಸಲಾಗಿದೆ.

ಇದರಲ್ಲಿ ಪುಸ್ತಕ ಬಿಡುಗಡೆ, ಕವಿ ಗೋಷ್ಠಿ, ಸಾಧಕರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಧನ ಶ್ರೀ ರಾಷ್ಟ್ರೀಯ ಪ್ರಶಸ್ತಿಗೆ ತುಮಕೂರಿನ ಶ್ರೀಮತಿ ಲೀಲ ಗುರುರಾಜ್ ರವರು ಆಯ್ಕೆಯಾಗಿದ್ದಾರೆ. ಮೇ ಐದರಂದು ಹೈದರಾಬಾದಿನಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ನಡೆಯಲಿದೆ.

ಶ್ರೀಮತಿ ಲೀಲಾ ಗುರುರಾಜ್ ವೃತ್ತಿಯಲ್ಲಿ ಹಣಕಾಸು ಸಂಸ್ಥೆಯ ವ್ಯವಸ್ಥಾಪಕರು. ಅವರು ಮೂಲತ: ತುಮಕೂರಿನವರು. ಪ್ರವೃತ್ತಿಯಲ್ಲಿ ಲೇಖಕಿ, ಗಾಯಕಿ ಮತ್ತು ಯೋಗ ಶಿಕ್ಷಕಿ. ಅವರ ಓದು ಅರ್ಥಶಾಸ್ತ್ರದಲ್ಲಿ ಎಂಎ ಮತ್ತು ಯೋಗ ವಿಷಯದಲ್ಲಿ ಪಿಜಿ ಕೋರ್ಸ್ ಮಾಡಿದ್ದಾರೆ. ಸನಾತನ ಹಿಂದೂ ಧರ್ಮದ ಪ್ರಚಾರಕರು. ಲೇಖನ ಮತ್ತು ಕವನಗಳನ್ನು ಬರೆಯುತ್ತಾ ಬಂದಿದ್ದಾರೆ. ಇವರಿಗೆ ಸೇವಾ ಸಾಹಿತ್ಯ ರತ್ನ, ಕರುನಾಡ ರತ್ನಪ್ರಶಸ್ತಿ, ಕರುನಾಡ ಕಾಯಕಯೋಗಿ ಪ್ರಶಸ್ತಿ ಪಡೆದಿದ್ದಾರೆ.

## ಅಭ್ಯರ್ಥಿಗಳ ಚುನಾವಣಾ ವೆಚ್ಚಗಳ ಲೆಕ್ಕ ಪತ್ರ ತಪಾಸಣೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ಪರಿಶಿಷ್ಟ ಜಾತಿ ಮೀಸಲು ಲೋಕಸಭಾ ಮತಕ್ಷೇತ್ರಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಲೆಕ್ಕಪತ್ರವನ್ನು ಜನಪ್ರತಿನಿಧಿಗಳ ಕಾಯ್ದೆ 1951 ರ ಕಲಂ 77 (1)ರ ಪ್ರಕಾರ ವೆಚ್ಚ ವೀಕ್ಷಕರು ತಪಾಸಣೆ ನಡೆಸಲಿದ್ದಾರೆ.

ಮೊದಲನೇ ತಪಾಸಣೆ ಏಪ್ರೀಲ್ 26, ಎರಡನೇ ತಪಾಸಣೆ ಮೇ 1 ಹಾಗೂ ಮೂರನೇ ತಪಾಸಣೆ ಮೇ 5 ರಂದು ಬೆಳಿಗ್ಗೆ 11 ಗಂಟೆಯಿಂದ ಮಾಡಲಾಗುತ್ತಿದೆ. ಈ ದಿನಗಳಂದು ಅಭ್ಯರ್ಥಿಗಳು ತಮ್ಮ ಚುನಾವಣಾ ಏಜೆಂಟರುಗಳ ಮೂಲಕ ಬಿಳಿ ಬಣ್ಣದ ದೈನಂದಿನ ಖರ್ಚು ವೆಚ್ಚಗಳ ಪುಸ್ತಕ ಭಾಗ–ಎ, ಗುಲಾಬಿ ಬಣ್ಣದ ನಗದು ಪುಸ್ತಕ ಭಾಗ–ಬಿ ಮತ್ತು ಹಳದಿ ಬಣ್ಣದ ಬ್ಯಾಂಕ್ ನಗದು ಪುಸ್ತಕ, ಭಾಗ–ಸಿ ಪುಸ್ತಕಗಳನ್ನು ಕಾಲೋಚಿತಗೊಳಿಸಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯುವ ಅಭ್ಯರ್ಥಿಗಳ ಲೆಕ್ಕ ಪತ್ರಗಳ ತಪಾಸಣೆಗೆ ಅಭ್ಯರ್ಥಿಗಳು/ಚುನಾವಣಾ ಎಜೆಂಟರುಗಳು ಕಡ್ಡಾಯವಾಗಿ ಹಾಜರಾಗುವಂತೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿಣ್ಣರಿಗೆ ಮೂರು ದಿನದ ಚೈತ್ರದ ಶಿಬಿರ

**ಉದಯರಶ್ಮಿ ನ್ಯೂಸ್**

ಸಿಂದಗಿ: ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಏ.27–29ರ ವರೆಗೆ ಚಿಣ್ಣರಿಗೆ ಮೂರು ದಿನಗಳ ಕಾಲ ಚಿಗುರು–ಚಿಲಿಪಿಲಿ ಚೈತ್ರದ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಬ್ರಹ್ಮಾಕುಮಾರಿ ರಾಜಯೋಗಿನಿ ಪವಿತ್ರಾ ಅಕ್ಕನವರು ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ 10ರಿಂದ ಸಾಯಂಕಾಲ 4ಗಂಟೆಯವರೆಗ ಜರುಗಲಿರುವ ಶಿಬಿರದ ಮಾರ್ಗದರ್ಶಕರಾಗಿ ಬಾಗಲಕೋಟೆಯ ಬಿ.ಕೆ. ನಾಗರತ್ನ ಅಕ್ಕನವರು, ಎಂ.ಕೆ ಹುಬ್ಬಳ್ಳಿಯ ಬಿ.ಕೆ ಜ್ಯೋತಿ ಅಕ್ಕನವರು, ಬಿ.ಕೆ ಗಾಯತ್ರಿ ಅಕ್ಕನವರು, ಶಿಕ್ಷಣ ತಜ್ಞ ಎಚ್.ಟಿ. ಕುಲಕರ್ಣಿ ಗುರುಗಳು, ಶಿಕ್ಷಕ ವ್ಯಂಗ್ಯ ಚಿತ್ರಗಾರ ಶರಣು ಚಟ್ಟಿ, ಚಿತ್ರಕಲಾ ಶಿಕ್ಷಕ ಎಂ.ಬಿ ಅಲ್ದಿ, ಗುಂಡಣ್ಣ ಕುಂಬಾರ, ರೇಣುಕ ಗವಾಯಿ, ದೈಹಿಕ ಶಿಕ್ಷಕ ಸಿದ್ದಲಿಂಗ ಚೌದರಿ ಭಾಗವಹಿಸುವರು.

ಶಿಬಿರದಲ್ಲಿ ಯೋಗಾಸನ, ಧ್ಯಾನ, ಕ್ರಾಫ್ಟ್, ಸ್ಪೋಕನ್ ಇಂಗ್ಲೀಷ್,ವ್ಯಂಗ್ಯ ಚಿತ್ರಕಲೆ, ನೃತ್ಯ, ಸ್ವಾನುಭೂತಿ, ಸ್ವಯಂ ಜಾಗೃತಿ, ತಾರ್ಕಿಕ ಶಕ್ತಿಯ ವೃದ್ಧಿ, ಜ್ಞಾನದ ಮಹತ್ವ ಮತ್ತು ಸ್ಮರಣ ಶಕ್ತಿಯನ್ನು ಹೆಚ್ಚಿಸುವ ವಿಧಿ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. 6–9ನೇ ತರಗತಿಯ ವಿದ್ಯಾರ್ಥಿಗಳು ಶಿಬಿರದ ಲಾಭವನ್ನು ಪಡೆದುಕೊಳ್ಳಬೇಕು. ಈ ಶಿಬಿರವು ಉಚಿತವಾಗಿದ್ದು, ಕೂಡಲೇ ಎಲ್ಲ ಮಕ್ಕಳು 8095065687 ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಸಿಂದಗಿ ಸೇವಾ ಕೇಂದ್ರದ ಬ್ರಹ್ಮಾಕುಮಾರಿ ರಾಜಯೋಗಿನಿ ಪವಿತ್ರ ಅಕ್ಕನವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.29ರ ಕ್ವೀಜ್ ಕಾರ್ಯಕ್ರಮಕ್ಕೆ ಆಸಕ್ತರಿಂದ ನೋಂದಣಿಗೆ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ನಿಮಿತ್ಯ ಮತದಾನದ ಜಾಗೃತಿ ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ವಿಜಯಪುರ ಹಾಗೂ ಮಹಾನಗರ ಪಾಲಿಕೆ ವಿಜಯಪುರ ಇವುಗಳ ಸಹಯೋಗದಲ್ಲಿ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಚುನಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಏ.29ರಂದು ಬೆಳಗ್ಗೆ 10.30ಕ್ಕೆ ಕ್ವೀಜ್ ಕಾರ್ಯಕ್ರಮ ಏರ್ಪಡಿಸಲಾಗಿದೆ.

10ರಿಂದ 16 ವಯಸ್ಸು ಹಾಗೂ 17 ರಿಂದ 23 ವಯಸ್ಸಿನ ಆಸಕ್ತರು ವಿಜಯಪುರ ಮಹಾನಗರ ಪಾಲಿಕೆಯ ಆವಕ ವಿಭಾಗದಲ್ಲಿ ಏ.26 ಸಂಜೆ 5ರ ಒಳಗಾಗಿ ತಮ್ಮ ಹೆಸರನ್ನು ನೋದಾಯಿಸಿಕೊಳ್ಳಬಹುದು ಎಂದು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಕ್ತಿ ಮತ್ತು ಶಕ್ತಿಗೆ ಹನುಮಂತನೆ ಮೂಲ :ಜಂಬುನಾಥ ಕಂಚಾಣಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸತ್ಸಂಗದಿಂದ ಮಾತ್ರ ಮನಸ್ಸು ಶುದ್ಧೀಕರಣಗೊಳ್ಳಲು ಸಾಧ್ಯ ಎಂದು ಹಿರಿಯ ಸಾಹಿತಿ ಜಂಬುನಾಥ ಕಂಚಾಣಿ ಹೇಳಿದರು. ಮಂಗಳವಾರ ನಗರದ ಸಾಯಿ ರೆಸಿಡೆನ್ಸಿ ಬಡಾವಣೆಯ ವೀರಾಂಜನೇಯ ದೇವಸ್ಥಾನದ ಕ್ಷೇಮಾಭಿವೃದ್ಧಿ ಸಮಿತಿಯು ಹಮ್ಮಿಕೊಂಡ ಹನುಮಾನ ಜಯಂತಿ ಉತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿ, ಜಾತ್ರೆ ಮತ್ತು ಮಹಾತ್ಮರ ಜಯಂತ್ಯೋತ್ಸವಗಳ ನೆಪದಲ್ಲಿ ಮನಸ್ಸು ವಿಕಸನಗೊಳ್ಳುವ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು.




ರಾಮನ ಬಂಟನಾದ ಹನುಮಂತ ಬಹು ಜನಪ್ರಿಯನಾದ ನಾಡದೇವತೆ, ಊರ ಹೊರಗಿದ್ದ ಹನುಮಾನ ದೇವಾಲಗಳು ಇಂದು ಊರಿನ ಮಧ್ಯ ಹಾಗೂ ಜನರ ಹೃದಯದಲ್ಲಿ ಸ್ಥಾಪಿತವಾಗಿವೆ. ನಾವು ಮಾಡುವ ಭಕ್ತಿ ಮನಸ್ಸುಗಳನ್ನು ಬೆಸೆಯುವ ಹಾಗಿರಬೇಕು. ರಾಮ ಮತ್ತು ಸೀತೆಯರನ್ನು ಒಂದುಗೂಡಿಸಿದ ಹನುಮಂತ ಭಕ್ತಿಗೆ, ಶಕ್ತಿಗೆ, ಯುಕ್ತಿಗೆ, ಜ್ಞಾನಕ್ಕೆ ಮೂಲನಾಗಿರುವನು ಎಂದರು.

ಸಾನಿಧ್ಯ ವಹಿಸಿ ಮಾತನಾಡಿದ ಶಿವ ಬಸವ ಯೋಗಾಶ್ರಮದ ಮಾತೋಶ್ರೀ ದಾನಮ್ಮ ತಾಯಿಯವರು ಮಾತನಾಡಿ, ಮಹಾತ್ಮರನ್ನು ನೆನೆಯುವುದೇ ಘನ ಮುಕ್ತಿ ಪದಂ ಎನ್ನುವಂತೆ ಈ ನಾಡಿನಲ್ಲಿ ಜನಿಸಿ ಜನರ ಬದುಕನ್ನು ಹಸನುಗೊಳಿಸಲು ಶ್ರಮಿಸಿದ ಶರಣರನ್ನು ಸತ್ಪುರುಷರನ್ನು ನಾವು ನಿತ್ಯವೂ ನೆನೆಯಬೇಕು, ಹನುಮಾನ ಜಯಂತಿಯ ಮೂಲಕ ನಿಷ್ಠೆಯಿಂದ ಭಕ್ತಿ ಮಾಡುವ ಮನೋಭಾವ ಹೆಚ್ಚಿಸಿಕೊಂಡು ಯಾವತ್ತೂ ಸತ್ಸಂಗದಲ್ಲಿ ಭಾಗಿಯಾಗಿ ನಿಜ ಸುಖವನ್ನು ಅನುಭವಿಸಬೇಕು ಎಂದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೀರಾಂಜನೇಯ ದೇವಸ್ಥಾನದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎಸ್ ಡಿ ಕೃಷ್ಣಮೂರ್ತಿ ವಹಿಸಿಕೊಂಡಿದ್ದರು.

ವೇದಿಕೆಯಲ್ಲಿ ಮಲ್ಲಿಕಾರ್ಜುನ ಗಡಗಿ, ಮಹಾಲಕ್ಷ್ಮಿ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ಸುಧಾ ರಾ ಇಂಡಿ, ರಾಣಿ ಕಿತ್ತೂರು ಚೆನ್ನಮ್ಮ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ಗೌರಮ್ಮ ಕುಬಕಡ್ಡಿ ಅತಿಥಿಗಳಾಗಿ ಭಾಗವಹಿಸಿದ್ದರು, ಇದೇ ಸಂದರ್ಭದಲ್ಲಿ ಡಾ. ಸಿ ಕೆ ಹೊಸಮನಿ, ಎಸ್ ಬಿ ಪೂಜಾರ, ಅಮೋಘಸಿದ್ದ ಹಂಜಗಿ ದಂಪತಿಗಳನ್ನು ಸನ್ಮಾನಿಸಲಾಯಿತು, ಕಾರ್ಯಕ್ರಮದಲ್ಲಿ ಮುಖಂಡರಾದ ಮಹಾದೇವ ಕಾಮಗೊಂಡ, ಈರಣ್ಣ ನಾಗರಾಳ, ಎಸ್ ಬಿ ಹಳಗುಣಕಿ, ಬೇವೂರು, ಎಸ್ ಟಿ ಕನಕ, ಶಿವಾನಂದ ಯಾಳವಾರ, ಹೆಚ್ ಹೆಚ್ ಭರಡ್ಡಿ, ಶ್ರೀಕಾಂತ್ ಜಮುಖಂಡಿ, ಬಿ ಆರ್ ನರಗುಂದ, ಹೆಚ್ ಎಲ್ ಸಂಕ, ರಾಜಶೇಖರ ಇಂಡಿ, ಎಸ್ ಎಸ್ ದುರಗದ, ಚಿದಾನಂದ ಗಡಗಿ, ಸಿದ್ದು ಇಜೇರಿ, ಬಸವರಾಜ ಪವಾರ, ಸುನೀಲ್ ಟಂಕಸಾಲೆ ಸೇರಿದಂತೆ ಹಲವರು ಭಾಗವಹಿಸಿದ್ದರು ಎಂ ಬಿ ಮಮದಾಪೂರ ಹಾಗೂ ಸಾವಿತ್ರಿಬಾಯಿ ಮುಂಡಾಸ್ ಕಾರ್ಯಕ್ರಮ ನಿರೂಪಿಸಿದರು ಪಂಡಿತರಾವ ಪಾಟೀಲ್ ವಂದಿಸಿದರು

ಬೆಳಿಗ್ಗೆ ದೇವಸ್ಥಾನದ ಆವರಣದ ವೀರಾಂಜನೇಯ ಸ್ವಾಮಿಯ ಮೂರ್ತಿಗೆ ಅಭಿಷೇಕ, ವಿಶೇಷ ಪೂಜೆ ನಡೆದವು ನಂತರ ಅತ್ಯಂತ ಸಂಭ್ರಮ ಹಾಗೂ ಭಕ್ತಿ ಭಾವದಿಂದ ಮಹಿಳಾ ಭಕ್ತರು ಬಾಲ ಹನುಮನನ್ನು ತೊಟ್ಟಿಲಲ್ಲಿ ಹಾಕಿ ಜೋಗುಳ ಪದಗಳನ್ನು ಹಾಡಿ ನಾಮಕರಣ ಕಾರ್ಯಕ್ರಮವನ್ನು ಧಾರ್ಮಿಕ ವಿಧಿ ವಿಧಾನಗಳ ಮೂಲಕ ಮಾಡುವ ಮೂಲಕ ಸಂಭ್ರಮಿಸಿದರು

ಮಧ್ಯಾಹ್ನ ಅನ್ನ ಪ್ರಸಾದ ನಡೆಯಿತು ಈ ಕಾರ್ಯಕ್ರಮದಲ್ಲಿ ಸಾಯಿ ರೆಸಿಡೆನ್ಸಿ, ಸದಾಶಿವ ನಗರದ ಹಾಗೂ ಎಕ್ಸಾಟಿಕ್ ಕಾಲೋನಿಗಳ ನೂರಾರು ಜನ ಭಕ್ತರು ಭಾಗವಹಿಸಿ ಹನುಮ ಜಯಂತಿಯನ್ನು ಭಕ್ತಿ ಸಡಗರದಿಂದ ಆಚರಿಸಿದರು

## ಅಗತ್ಯ ಸೇವೆಯಡಿ ಬರುವ ಮತದಾರರಿಗೆ ಮೇ.1ರಿಂದ 3ರವರೆಗೆ ಮತದಾನಕ್ಕೆ ಅವಕಾಶ

**ಉದಯರಶ್ಮಿ ನ್ಯೂಸ್**

ವಿಜಯಪುರ: ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ವಿಜಯಪುರ ಮೀಸಲು ಕ್ಷೇತ್ರದ ಮತದಾರರಾಗಿದ್ದು, ಲೋಕಸಭಾ ಕ್ಷೇತ್ರದಲ್ಲಿ ಮತ್ತು ಬೇರೆ ಲೋಕಸಭಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮತದಾರರು ಮೇ.7 ರಂದು ಮತಗಟ್ಟೆಗೆ ಆಗಮಿಸಿ ಮತದಾನ ಮಾಡಲು ಸಾಧ್ಯವಾಗದೇ ಇರುವ ಅರ್ಹ ಅಗತ್ಯ ಸೇವೆಯಡಿ ಬರುವ ಗೈರು ಹಾಜರಿ ಮತದಾರರಿಗೆ ಮೇ. 1 ರಿಂದ 3ರವರೆಗೆ ಬೆಳಗ್ಗೆ 9 ರಿಂದ ಸಂಜೆ 5ರ ವರೆಗೆ ಪೋಸ್ಟ್ ವೋಟಿಂಗ್ ಸೆಂಟರ್ ವ್ಯವಸ್ಥೆ ಕಲ್ಪಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಸಹಾಯಕ ನಿರ್ದೇಶಕರ ಕಚೇರಿ, ಅನೌಪಚಾರಿಕ ಪಡಿತರ ವಿಭಾಗ, ಆಹಾರ ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ವಿಜಯಪುರ ಇಲ್ಲಿ ಪೋಸ್ಟ್ ವೋಟಿಂಗ್ ಸೆಂಟ-ರ್ ಸ್ಥಾಪಿಸಲಾಗಿದೆ. ಅದರಂತೆ ಅಗತ್ಯ ಸೇವೆಯಡಿ ಬರುವ ಗೈರು ಹಾಜರಿ ಮತದಾರರು ಮತದಾನ ಕೇಂದ್ರದಲ್ಲಿ ಚುನಾವಣೆ ಆಯೋಗ ಸೂಚಿಸಿರುವ ದಾಖಲಾತಿಗಳನ್ನು ಅಥವಾ ಗುರುತಿನ ಚೀಟಿಯೊಂದಿಗೆ ಹಾಜರಾಗಿ ಮತ ಚಲಾಯಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 6ನೇ ತರಗತಿ ಪ್ರವೇಶಾತಿ ಅರ್ಹತಾ ಪರೀಕ್ಷೆ ಅರ್ಜಿ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: 2023-24ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ವಿಜಯಪುರ ಜಿಲ್ಲೆಯಲ್ಲಿಯ ಖಾಸಗಿ ಶಾಲೆಗಳಿಗೆ 6ನೇ ತರಗತಿಗೆ ಪ್ರವೇಶ ಕಲ್ಪಿಸಲು ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲು ಮೇ.9 ರಿಂದ ಅರ್ಜಿಗಳನ್ನು ಸ್ವೀಕ-ರಿಸಲಾಗುವುದು. ಅರ್ಜಿಗಳನ್ನು ಸಲ್ಲಿಸಲು ಮೇ.21 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಕಚೇ-ರಿಯನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಪುಂಡಲೀಕ್ ಮಾನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಏ.27 ರಿಂದ 29ರವರೆಗೆ ಅಂಚೆಮತಪತ್ರದ ಮೂಲಕ ಮತದಾನ

# ಅಂಚೆ ಮತಪತ್ರ ಚುನಾವಣೆ ಕಾರ್ಯಕ್ಕೆ 69 ತಂಡಗಳ ರಚನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಸಂಬಂಧ ವಿಜಯಪುರ ಮೀಸಲು ಕ್ಷೇತ್ರ ವ್ಯಾಪ್ತಿಯಲ್ಲಿ 85 ವರ್ಷ ಮೇಲ್ಪಟ್ಟ ಹಿರಿಯ ಮತದಾರರು, ವಿಶೇಷ ಚೇತನ ಮತದಾರರು ಹಾಗೂ ಅಂಚೆ ಮತಪತ್ರ ಸಲ್ಲಿಸಲು ನಮೂನೆ 18 ಡಿ ಅರ್ಜಿ ಸಲ್ಲಿಸಿ ಅರ್ಹರಾದ ಮತದಾರರಿಗೆ ಏ.27 ರಿಂದ ಏ.29 ರವರೆಗೆ ಮೂರು ದಿನಗಳ ಕಾಲ ಅವಕಾಶ ಕಲ್ಪಿಸಲಾಗಿದೆ. ಈ ವೇಳೆ ಮತದಾನ ತಂಡಗಳು ಮನೆಯ ಬಾಗಿಲಿಗೆ ಬರಲಿವೆ. ಅಂಚೆ ಮತ ಪತ್ರ ಚುನಾವಣೆ ಕಾರ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು 69 ತಂಡಗಳನ್ನು ರಚನೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಟಿ. ಭೂಬಾಲನ್ ತಿಳಿಸಿದ್ದಾರೆ.

ಮುದ್ದೇಬೀಹಾಳ ವಿಧಾನಸಭಾ ವ್ಯಾಪ್ತಿಯಲ್ಲಿ 251 ಹಿರಿಯ ಮತದಾರರು, 142 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 393 ಮತದಾರರಿಗೆ 8 ಮತದಾನ ತಂಡಗಳನು ನೇಮಕ ಮಾಡಲಾಗಿದೆ. ದೇವರಹಿಪ್ಪರಗಿ ವಿಧಾನಸಭಾ ವ್ಯಾಪ್ತಿಯಲ್ಲಿ 187 ಹಿರಿಯ ಮತದಾರರು, 58 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 245 ಮತದಾರರಿಗೆ 6 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ಬಸವನ ಬಾಗೇವಾಡಿ ವಿಧಾನಸಭಾ ವ್ಯಾಪ್ತಿಯಲ್ಲಿ 332 ಹಿರಿಯ ಮತದಾರರು, 123 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 445 ಮತದಾರ-ರಿಗೆ 9 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ಬಬಲೇಶ್ವರ ವಿಧಾನಸಭಾ ವ್ಯಾಪ್ತಿಯಲ್ಲಿ 374 ಹಿರಿಯ ಮತದಾರರು, 102 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 476 ಮತದಾರರಿಗೆ 10 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ವಿಜಯಪುರ ನಗರ ವಿಧಾನಸಭಾ ವ್ಯಾಪ್ತಿಯಲ್ಲಿ 194 ಹಿರಿಯ ಮತದಾರರು, 42 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 236 ಮತದಾರ-ರಿಗೆ 5 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ನಾಗಠಾಣ ವಿಧಾನಸಭಾ ವ್ಯಾಪ್ತಿಯಲ್ಲಿ 219 ಹಿರಿಯ ಮತದಾರರು, 66 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 285 ಮತದಾರ-ರಿಗೆ 7 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ಇಂಡಿ ವಿಧಾನಸಭಾ ವ್ಯಾಪ್ತಿಯಲ್ಲಿ 450 ಹಿರಿಯ ಮತದಾರರು, 226 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 676 ಮತದಾರ-ರಿಗೆ 14 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ. ಸಿಂದಗಿ ವಿಧಾನಸಭಾ ವ್ಯಾಪ್ತಿಯಲ್ಲಿ 350 ಹಿರಿಯ ಮತದಾರರು, 127 ವಿಶೇಷ ಚೇತನ ಮತದಾರರು ಸೇರಿದಂತೆ ಒಟ್ಟು 477 ಮತದಾರರಿಗೆ 10 ಮತದಾನ ತಂಡಗಳನ್ನು ನೇಮಕ ಮಾಡಲಾಗಿದೆ.

ಸದರಿ ದಿನಾಂಕಗಳಂದು ಮತದಾನ ತಂಡಗಳು ಮನೆಗಳಿಗೆ ಭೇಟಿ ನೀಡಲಿದ್ದು, ಎಲ್ಲಾ ಅರ್ಹ ಅಭ್ಯರ್ಥಿಗಳು ಮನೆಯಲ್ಲಿ ಇದ್ದು ಅಂಚೆ ಮತಪತ್ರದ ಮೂಲಕ ಮತದಾನ ಮಾಡಬೇಕು. ಈ ಸೌಲಭ್ಯ ಹೊರತುಪಡಿಸಿ, ಗೈರು ಹಾಜರಾದ ಮತದಾರರಿಗೆ ಮತದಾನ ಮಾಡಲು ಬೇರೆ ಯಾವುದೇ ಪರ್ಯಾಯ ವ್ಯವಸ್ಥೆ ಇರುವುದಿಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸೆ ಆಮಿಷಗಳಿಗೆ ಒಳಗಾಗದೆ ಮತ ಚಲಾಯಿಸಿ :ಸುಬ್ರಮಣ್ಯ

**ಉದಯರಶ್ಮಿ ನ್ಯೂಸ್**

ಸಿಂದಗಿ: ಜಿಲ್ಲೆಯಲ್ಲಿ ಮೇ.7ರಂದು ಲೋಕಸಭಾ ಚುನಾವಣಾ ಮತದಾನ ನಡೆಯಲಿದ್ದು, ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಮುಕ್ತ ಮತ್ತು ನ್ಯಾಯಯುತವಾಗಿ ಮತ ಚಲಾಯಿಸಿ ಎಂದು ತಾಪಂ ಇಒ ಸುಬ್ರಮಣ್ಯ ಶರ್ಮಾ ಹೇಳಿದರು.




ಪಟ್ಟಣದ ಬಸವೇಶ್ವರ ವೃತ್ತದಲ್ಲಿ ತಾಲೂಕು ಆಡಳಿತ, ತಾಲೂಕು ಸ್ವೀಪ್ ಸಮಿತಿ, ತಾಲೂಕು ಪಂಚಾಯತ್, ಶಿಕ್ಷಣ ಇಲಾಖೆ, ಪುರಸಭೆ ಕಾರ್ಯಾಲಯ, ಸಿಡಿಪಿಒ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಂಡ ಮತದಾನ ಜಾಗೃತ ಅಭಿಯಾನ ಜಾಥಾ ಮತ್ತು ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೇ.7ರಂದು ಎಲ್ಲರೂ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿ. ಮತದಾನ ಪ್ರತಿಶತ ಹೆಚ್ಚಿಸಿ. ನಿಮ್ಮ ಹಕ್ಕು ಚಲಾಯಿಸಿ ಎಂದರು.

ಈ ವೇಳೆ ಬಸವೇಶ್ವರ ವೃತ್ತದಿಂದ ಪ್ರಾರಂಭವಾದ ಜಾಥಾ ಸಂಗೊಳ್ಳಿ ರಾಯಣ್ಣ ವೃತ್ತ, ಅಂಬಿಗರ ಚೌಡಯ್ಯ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಮಹಾತ್ಮಾ ಗಾಂಧಿ ವೃತ್ತದ ಮಾರ್ಗವಾಗಿ ತಾಲೂಕು ಪಂಚಾಯತ್ ಕಚೇರಿಗೆ ಜಾಥಾ ಕಾರ್ಯಕ್ರಮವು ತಲುಪಿ ಸಮಾಪ್ತಿಗೊಂಡಿತು.

ಇದೇ ಸಂದರ್ಭದಲ್ಲಿ ಆಲಮೇಲ ತಾಪಂ ಇಒ ಪರಿದಾ ಪಠಣ, ಕ್ಷೇತ್ರ ಶಿಕ್ಷಣಾಧಿಕಾರಿ ಆರಿಫ್ ಬಿರಾದಾರ್, ಸಿಡಿಪಿಒ ಶಂಭುಲಿಂಗ ಹಿರೇಮಠ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಹರಿ ಕುಲಕರ್ಣಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ನರೇಗಾ ನೌಕರರು, ಗ್ರಾಮಕಾಯಕ ಮಿತ್ರರು, ಮಹಿಳಾ ಒಕ್ಕೂಟದ ಸದಸ್ಯರು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ವಿದ್ಯಾರ್ಥಿಗಳು ಸೇರಿದಂತೆ ತಾಲೂಕಿನ ಎಲ್ಲ ಇಲಾಖೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

---

**ವ್ಯಕ್ತಿತ್ವ ವಿಕಸನ ಮಾಲೆ.**

# ನೆಮ್ಮದಿಯ ಬದುಕಿಗೆ ತೃಪ್ತಿಯೇ ಸೋಪಾನ

**ಉದಯರಶ್ಮಿ ದಿನಪತ್ರಿಕೆ**




**ಜಯ್ನುಡಿ**

● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

ಹಫೀಸ್ ಆಫ್ರಿಕಾದ ಒಬ್ಬ ಸಂತೃಪ್ತ ರೈತನಾಗಿದ್ದ. ಆತ ಸಂತೋಷವಾಗಿದ್ದುದು ಏಕೆಂದರೆ ಆತ ಸಂತುಷ್ಟನಾಗಿದ್ದ. ಆತ ಸಂತುಷ್ಟನಾಗಿದ್ದ ಏಕೆಂದರೆ ಆತ ಸಂತೋಷದಿಂದಿದ್ದ. ಒಂದು ದಿನ ವಿವೇಕಿಯೊಬ್ಬ ರೈತನಲ್ಲಿಗೆ ಬಂದು ವಜ್ರದ ದಿವ್ಯ ಪ್ರಭೆ ಜ್ವಾಜಲ್ಯ ಹಾಗೂ ಮಹತ್ವವನ್ನು ಹೇಳಿ ಅದನ್ನು ಹೊಂದಿದ್ದರೆ ಸಿಗುವ ಅಧಿಕಾರ ಮತ್ತು ಘನತೆಯ ಬಗ್ಗೆ ವಿವ-ರಿಸಿದ. ಅಷ್ಟಕ್ಕೆ ಸುಮ್ಮನಾಗದ ಆತ ಹೇಳಿದ. " ನಿನ್ನ ಬಳಿ ಹೆಬ್ಬೆಟ್ಟಿನ ಗಾತ್ರದ ವಜ್ರವಿದ್ದಿದ್ದರೆ ನೀನು ನಿನ್ನದೇ ಆದ ಒಂದು ನಗರವನ್ನು ಹೊಂದಬಹುದು. ನಿನ್ನ ಬಳಿ ಮುಷ್ಟಿಯ ಗಾತ್ರದ ವಜ್ರವಿದ್ದರೆ ನೀನು ನಿನ್ನದೇ ಆದ ದೇಶವನ್ನು ಹೊಂದಬಹುದು." ಅಷ್ಟು ಹೇಳಿ ಅಲ್ಲಿಂದ ನಿರ್ಗಮಿಸಿದ. ಆ ರಾತ್ರಿ ಆ ರೈತ ನಿದ್ರಿಸಲಿಲ್ಲ. ಆತ ಅಸಮಾಧಾನಿಯೂ ಅಸಂತುಷ್ಟನೂ ಆಗಿದ್ದ.

ಮರುದಿನ ಹಫೀಸ್ ತನ್ನ ಹೊಲವನ್ನು ಮಾರಿ ವಜ್ರವನ್ನು ಅರಸುತ್ತ ಅಲೆಯತೊಡಗಿದ. ಆತ ಆಫ್ರಿಕದಲ್ಲೆಡೆ ಸಂಚರಿಸಿದರೂ ವಜ್ರ ದೊರೆಯಲಿಲ್ಲ. ವಜ್ರಕ್ಕಾಗಿ ಅರಸುತ್ತಾ ಸ್ಪೇನಿಗೆ ಅಲೆಯುತ್ತಾ ಬಂದಾಗ ಆತ ಮಾನಸಿಕವಾಗಿ ದೈಹಿಕವಾಗಿ ಆರ್ಥಿಕವಾಗಿ ಕುಸಿದುಹೋಗಿದ್ದ. ಆತ ಎಷ್ಟೊಂದು ಹತಾಶನಾಗಿದ್ದನೆಂದರೆ ಬಾರ್ಸಿಲೋನಾ ನದಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡು ಬಿಟ್ಟ. ಆತನ ಜಮೀನನ್ನು ಖರೀದಿಸಿದವನು ಅದರಲ್ಲಿ ಹರಿಯುತ್ತಿದ್ದ ನದಿಯಲ್ಲಿ ತನ್ನ ಒಂಟೆಗಳ ಮೈ ತೊಳೆಯುವಾಗ ದಡದಲ್ಲಿದ್ದ ಕಲ್ಲಿನ ಮೇಲೆ ಬಿದ್ದ ಸೂರ್ಯ ಕಿರಣ ಪ್ರತಿಫಲಿಸಿ ಕಣ್ಣು ಕುಕ್ಕಿದಂತಾಯಿತು ಕುತೂಹಲದಿಂದ ಆ ಕಲ್ಲನ್ನು ಆಯ್ದುಕೊಂಡು ವಿವೇಕಿಗೆ ಕೊಟ್ಟು ಪರೀಕ್ಷಿಸಿದಾಗ ಅದು ವಜ್ರವೆಂದು ತಿಳಿದಿತ್ತು. ಆಶ್ಚರ್ಯ ಆ ಜಮೀನಿನಲ್ಲಿ ಎಕರೆಗಳಷ್ಟು ವಿಸ್ತಾರದ ವಜ್ರದ ಖನಿ ಇದ್ದಿತು.



ಈ ಕತೆಯ ತಾತ್ಪರ್ಯವಿಷ್ಟೇ. ನಮ್ಮಲ್ಲಿ ತೃಪ್ತಿಯ ಮನೋಭಾವವಿದ್ದರೆ ನಾವು ವಜ್ರಗಳ ಖನಿಯ ಮೇಲೆ ನಡೆಯುವದನ್ನು ಮನಗಾಣುತ್ತೇವೆ. ತೃಪ್ತಿ ಎನ್ನುವುದು ನಮ್ಮ ಕಾಲ ಕೆಳಗೇ ಇರುತ್ತದೆ. ಅದನ್ನು ಹುಡುಕುತ್ತ ಬೇರೆಲ್ಲೂ ಹೋಗಬೇಕಿಲ್ಲ. ನಾವು ಮಾಡಬೇಕಿರುವದೆಂದರೆ ಅದನ್ನು ಗುರುತಿಸಬೇಕಷ್ಟೆ.

ತೃಪ್ತಿ ಶಬ್ದದ ಅರ್ಥ ಪರಿಹಾರ, ಸಮಾಧಾನ, ಮೆಚ್ಚುಗೆ, ತಣಿವು, ಸಂತುಷ್ಟಿ ಎಂದಾಗುತ್ತದೆ. ಮಾನವನ ಬದುಕು ತುಂಬಾ ಸರಳವಾಗಿದೆ. ಆದರೆ ಅದನ್ನು ನಾವೇ ವಿವಿಧ ಸಮಸ್ಯೆಗಳಿಂದ ಸಂಕೀರ್ಣವಾಗಿಸಿಕೊಂಡಿದ್ದೇವೆ. ಕ್ಲಿಷ್ಟವಾಗಿಸಿದ್ದೇವೆ ಎನ್ನುವದು ಮೇದಾವಿಗಳ ನುಡಿ. ಬದುಕನ್ನು ಅನೇಕ ದಾರ್ಶನಿಕರು ಜ್ಞಾನಿಗಳು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಜೀವನವೆನ್ನುವದು ಹೋರಾಟ ಎನ್ನುವದೂ ಜೀವನದ ಬಗೆಗಿರುವ ವ್ಯಾಖ್ಯೆಯೇ. ಜೀವನವನ್ನು ಹೋರಾಟಮಯ ಮಾಡಿಕೊಳ್ಳಲು ಕಾರಣವೇನೆಂದು ಹುಡುಕಿದರೆ ನಿರಂತರ ಹೋರಾಟದ ಕೊನೆಯಲ್ಲಿ ನಿರೀಕ್ಷಿಸುತ್ತಿರುವದು ತೃಪ್ತಿಯಲ್ಲದೇ ಮತ್ತೇನೂ ಅಲ್ಲ ಎನ್ನುವದು ತಿಳಿದು ಬರುತ್ತದೆ. ನಿಮ್ಮೊಡನೆ ನೀವು ಜೀವಿಸುವ ಸಮರ್ಥತೆ ಹೊಂದಲು ಒಂದು ಸ್ವತಂತ್ರ ಆತ್ಮ ಸಾಕ್ಷಿ ಬಹು ಮುಖ್ಯ. ಮಹಾನ್ ಕಾರ್ಯಗಳು ಪ್ರಚೋದನೆಯಿಂದ ಮಾಡಲಾಗಿಲ್ಲ. ಅವು ತೃಪ್ತಿಯ ಫಲಗಳು. ಅವು ಸಂತೃಪ್ತಿಯ ಭಾವದಲ್ಲಿ ಸಣ್ಣ ವಿಷಯಗಳ ಒಂದು ಸರಣಿಯಿಂದ ಆಗಿವೆ.

ಔನತ್ಯಕ್ಕೇರಿಸುವ ಮಹಾನ ಶಕ್ತಿ ತೃಪ್ತಿಯು ನಮ್ಮನ್ನು ಹೊಸ ಹೊಸ ಕೆಲಸಗಳನ್ನು ಮಾಡಲು ಪ್ರೇರೇಪಿಸುತ್ತದೆ. ನಮ್ಮನ್ನು ಉತ್ಸಾಹದ ಚಿಲುಮೆಯನ್ನಾಗಿಸುವ ಶಕ್ತಿ ತೃಪ್ತಿಗಿದೆ. ನವೀನ ಚಿಂತನೆಗಳನ್ನು ಮಾಡಲೂ ತೃಪ್ತಿ ಸಹಕರಿಸುತ್ತದೆ. ಮಾನವನ ಜೀವನದ ಮೂಲ ಆಶಯವೇ



ಸಂತೃಪ್ತಿ. ನಾವೆಲ್ಲ ಬದುಕುವದು ಕೇವಲ ತೃಪ್ತಿಗಾಗಿ ಎಂದರೆ ತಪ್ಪಿಲ್ಲ. ತೃಪ್ತಿಯ ಭಾವವನ್ನು ಹೊಂದಲು ಬದುಕನ್ನು ಒಂದು ಸಂಘರ್ಷವೆಂದು ಸ್ವೀಕರಿಸಿದ್ದೇವೆ. ಸಂತೋಷ ಮತ್ತು ದುಃಖಗಳು ವಿಧಿಲಿಖಿತಗಳಲ್ಲ. ಅವು ನಾವಾಗಿ ಪಡೆದುಕೊಂಡವು ಎನ್ನುವದನ್ನು ತಿಳಿಸಿ ಅತ್ಯುತ್ತಮ ಜೀವನ ನಡೆಸಲು ಕಾರಣವಾಗುತ್ತದೆ. ಜೀವನ ಕ್ರಮವನ್ನು ಔನತ್ಯಕ್ಕೇರಿಸುವ ಮಹಾನ ಶಕ್ತಿಯೇ ತೃಪ್ತಿ.

ಅನುಭವಿಸುವ ಶ್ರೇಷ್ಠ ಭಾವ ಭಾವನೆಗಳ ಮೊತ್ತದಂತಿ-ರುವ ತೃಪ್ತಿ ನಾವು ಧ್ಯೇಯಗಳನ್ನು ಹೊಂದಿ ಧ್ಯೇಯಗಳಿಂದಲೇ ಮುಂದುವರೆಯುವಂತೆ ಸಾಮಾಜಿಕ ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ದೇವರಿಗೆ ಕೃತಜ್ಞರಾಗಲು ಸಹಾಯ ಮಾಡುವ ಉತ್ಕೃಷ್ಟ ಗುಣ ಸಂತೃಪ್ತಿಗಿದೆ. ಇದಲ್ಲದೆ ಕರ್ತವ್ಯದ ಕರೆಗಿಂತ ಬಹುದೂರ ಮುಂದುವರೆದು ಇತರರ ನಿರೀಕ್ಷೆಗಿಂತ ಹೆಚ್ಚಿಗೆ ಕಾರ್ಯ ಮಾಡಿಸುವದರ ಜೊತೆಗೆ ಒಳ್ಳೆಯ ಕೆಲಸಗಳನ್ನು ನಮ್ಮಿಂದ ಕೊಂಚ ಕೊಂಚವಾಗಿ ಮಾಡಿಸಿ ಅದನ್ನು ಮಹಾನ ಕಾರ್ಯವಾಗಿಸುವ ಹಂತದವರೆಗೂ ತಂದು ನಿಲ್ಲಿಸುವುದೇ ತೃಪ್ತಿ. ಎಲ್ಲೆಲ್ಲೂ ಗದ್ದಲ ಮನದ ತುಂಬೆಲ್ಲ ಭಾವಗಳ ಸಂತೆ ಇಂಥ ಭಾವಗಳ ಸಂತೆಯಲ್ಲೂ ನಾವೆಲ್ಲಾ ಏಕಾಂತವಾಗಿ ಇಷ್ಟ ಪಟ್ಟು ಅನುಭವಿಸುವ ಶ್ರೇಷ್ಠ ಭಾವವೇ ತೃಪ್ತಿ.

ಪಡೆಯುವವರು ಸಂತೃಪ್ತಿಯನ್ನು ಪಡೆಯಲಾರರು

ದೇವರು ಕಳಂಕವುಳ್ಳ ಉತ್ಪನ್ನಗಳನ್ನು ತಯಾ-ರಿಸುವದಿಲ್ಲ ಹಾಗೆಯೇ ತೃಪ್ತಿ ಭಾವ ದುಷ್ಕೃತ್ಯಗಳನ್ನು ಮಾಡಲು ಬಿಡುವುದಿಲ್ಲ. ತೃಪ್ತಿ ಭಾವ ಎನ್ನುವದು ನಾವು ಮನಸ್ಸಿಗೆ ಅಂದುಕೊಂಡ ತಕ್ಷಣ ಸುಮ್ಮನೆ ಅನುಭವಿಸಬಹುದಾದ ಭಾವವಲ್ಲ. ಹತ್ತು ಹಲವು ಕಷ್ಟಗಳನ್ನು ಅನುಭವಿಸಿದ ನಂತರ ಸುಖದ ತೃಪ್ತಿಯ ಅನುಭವವುಂಟಾಗುವುದು. ಸಾಮಾನ್ಯವಾಗಿ ಪಡೆಯುವವರು ಸಂತೃಪ್ತಿಯನ್ನು ಪಡೆಯಲಾರರು. ನೀಡುವವರು ಅದನ್ನು ಪಡೆಯುತ್ತಾರೆ. ನೀವು ತೆಗೆದುಕೊಳ್ಳುವದಕ್ಕಿಂತ ಹೆಚ್ಚು ಕೊಡುವದರಲ್ಲಿ ತೃಪ್ತಿಯಿದೆ. ವಿಷಯಗಳನ್ನು ಉತ್ತಮ ಪಡಿಸುವಿಕೆಯ ಕುರಿತು ಗಮನ ನೀಡುವಂತೆ ಮಾಡುತ್ತದೆ. ದೊಡ್ಡದು ಮಾಡುವದರ ಬಗ್ಗೆ ಅಲ್ಲ. ಅದೃಷ್ಟವಂತನಾದವನಿಗೆ ಹುಂಜವೂ ಸಹ ಮೊಟ್ಟೆಯಿಡುತ್ತದೆ. ಎಂದರೆ ಸಂತೃಪ್ತಿ ಭಾವ ಇರುವ ಕಡೆ ಉಳಿದೆಲ್ಲ ಬಲಹೀನತೆಗಳಿಗೆ ಸ್ಥಾನವಿಲ್ಲ. ತೃಪ್ತಿಯೆನ್ನುವದು ಒಂದು ಮಾನಸಿಕ ಸಂಪತ್ತು. ಅದನ್ನು ನಾವು ಹನಿ ಹನಿಯಾಗಿ ಸ್ವೀಕರಿಸಿದರೆ ಜೀವನ ಎಂಬ ಯುದ್ಧವನ್ನು ಅರ್ಧ ಗೆದ್ದಂತೆ ಆಗುವದು. ಒಂದು ಸಣ್ಣ ಕಿಡಿಯಿಂದ ಒಂದು ದೊಡ್ಡ ಜ್ವಾಲೆ ಏಳಬಹುದು. ಅದರ ತದ್ವಿರುದ್ಧದಂತೆ ಒಂದು ಸಂತೃಪ್ತಿಯ ಭಾವ ತನ್ನ ಸುಗಂಧವನ್ನು ಚೆಲ್ಲಿ ಚೈತನ್ಯದಾಯಕವಾಗಿ ಮಹಾತ್ಕಾರ್ಯವನ್ನು ಮಾಡಿಸಬಹುದು.

ತೃಪ್ತಿ ಪ್ರಯತ್ನದಲ್ಲಿದೆ ಫಲದಲ್ಲಿ ಅಲ್ಲ

ಸಂತೃಪ್ತಿಯೆನ್ನುವದು ನಿರಂತರವಾಗಿ ಶಕ್ತಿಯನ್ನು ಹೊರಹೊಮ್ಮುತ್ತಿರುವ ಒಂದು ವಿದ್ಯುತ್ ಕೋಶವಿದ್ದಂತೆ. ಆ ಕೋಶದ ಸದ್ಬಳಕೆಯಾಗದಿದ್ದರೆ ಜೀವನ ಎಂಬ ಬಳ್ಳಿ ಒಣಗಿ ಹೋಗುತ್ತದೆ. ಒಬ್ಬ ಸಿರಿವಂತ ಜಿಪುಣನು ಬಡವನಿಗಿಂತ ಬಡವನು. ಪಶ್ಚಾತ್ತಾಪ ಪಡುವ ಒಬ್ಬ ಪಾಪಿಯು ಯಾವುದೇ ಪ್ರಚೋದನೆಗಳಿಗೆ ಒಳಗಾಗುವ ಸನ್ಯಾಸಿಗಿಂತ ಹೆಚ್ಚು ಅರ್ಹನು. ತೃಪ್ತಿ ಭಾವದಲ್ಲಿ ಉತ್ತಮಿಕೆಗೆ ಜಿಪುಣತನ ಕಾಡುವದಿಲ್ಲ. ಸಣ್ಣ ಪುಟ್ಟ ಸಂಗತಿಗಳನ್ನು ಪೂರೈಸಿವುದರಲ್ಲಿಯೂ ತೃಪ್ತಿ ಅಡಗಿದೆ. ತೃಪ್ತಿ ಪ್ರಯತ್ನದಲ್ಲಿದೆ. ಫಲದಲ್ಲಿ ಅಲ್ಲ. ಹೆಚ್ಚು ಪ್ರಯತ್ನ ಅತ್ಯುತ್ತಮ ಫಲಿತಾಂಶ. ಸೋಮಾ-ರಿತನ ಚೆನ್ನಾಗಿದೆ ಅನಿಸುತ್ತದೆ ನಮ್ಮನ್ನು ಹೆಚ್ಚಾಗಿ ಆಕರ್ಷಿಸುತ್ತದೆ. ಆದರೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವಿಕೆ ಮಾತ್ರ ತೃಪ್ತಿಯನ್ನು ನೀಡುತ್ತದೆ.

ಶ್ರಮದ ದುಡಿಮೆಗೆ ಒಳಪಡಿಸಿಕೊಳ್ಳಿ

ತೃಪ್ತಿಯು ಭಾವ ಆವ-ರಿಸಿಕೊಂಡಾಗ ನಮ್ಮಲ್ಲಿ ಚೈತನ್ಯ ಉಕ್ಕಿ ಹರಿಯುವದು. ತೃಪ್ತಿ ಎನ್ನುವದು ನೆಮ್ಮದಿ ಜೀವನದ ಅಡಿಪಾಯದ ಕಲ್ಲು. ಈ ಅಡಿಪಾಯದ ಕಲ್ಲಿನ ಮೇಲೆ ಗೌರವದ ಕಟ್ಟಡವನ್ನು ಕಟ್ಟಲು ನಿರಂತರವಾದ ಶ್ರಮದ ದುಡಿಮೆಗೆ ಒಳಪಡಿಸಿಕೊಳ್ಳಿ. ಆಗಲೇ ತೃಪ್ತಿ ಎಂಬ ಭಾವ ನಿಮ್ಮದಾಗುವುದು.



ತೃಪ್ತಿ ಅತ್ಯಂತ ದಿವ್ಯವಾದ ಭಾವ. ಸಾಮಾನ್ಯ ಜ್ಞಾನವು ಅಸಾಮಾನ್ಯ ಮಟ್ಟದಲ್ಲಿದ್ದಾಗ ಅದನ್ನು ವಿವೇಕ ಎನ್ನುವರು. ತೃಪ್ತಿಯ ಭಾವ ಮನಸ್ಸನ್ನು ಆವರಿಸಿದಾಗ ವಿವೇಕಯುತವಾದ ಕಾರ್ಯಗಳಲ್ಲಿ ತೊಡಗಿಸಿ ಯಶಸ್ಸಿಗಿಂತ ಹೆಚ್ಚು ವಿಫಲತೆಯು ಕಲಿಸುತ್ತದೆ. ಎನ್ನುವದನ್ನು ತಿಳಿಸುತ್ತದೆ. ಗೆಲುವು ಎನ್ನುವುದು ಹಲವಾರು ಭಾವಗಳ ಸಂಗಮ. ವೈಫಲ್ಯತೆಯು ಆಗಾಗ್ಗೆ ಗೆಲುವಿನ ಕಡೆಗೆ ಮೊದಲ ಅವಶ್ಯಕ ಹೆಜ್ಜೆ. ಗೆಲುವು ತೃಪ್ತಿಯನ್ನು ಹರಡುವುದು. ತೃಪ್ತಿಯನ್ನು ಪಡೆಯಲೆಂದೇ ನಿತ್ಯದ ಬದುಕನ್ನು ಮನುಷ್ಯ ಬದುಕನ್ನು ಹೋರಾಟ ಮಯವಾಗಿಸಿಕೊಂಡಿದ್ದಾನೆ ಎನ್ನುವದು ಸತ್ಯ.



ದಿವ್ಯವಾದ ಎತ್ತರವಾದ ಸ್ಥಾನ

ತೃಪ್ತಿ ಎಲ್ಲರ ಬದುಕಿಗೂ ಅವಶ್ಯಕ. ತೃಪ್ತಿಯಿಂದ ಮಾತ್ರ ನಾವು ಮಾನಸಿಕವಾಗಿ ಸದೃಢವಾಗಿ ನಿಲ್ಲಲು ಸಾಧ್ಯ. ತೃಪ್ತಿ ಮನುಷ್ಯನಲ್ಲಿ ನೆಮ್ಮದಿ ಸೌಖ್ಯ ಶಾಂತಿಯನ್ನು ಹುಟ್ಟು ಹಾಕುವದು. ಮನುಷ್ಯ ತಾನು ನೆಮ್ಮದಿಯಿಂದಿದ್ದರೆ ಸಮಾಜವನ್ನು ನೆಮ್ಮದಿಯಿಂದ ಇಡಲು ಬಯಸುತ್ತಾನೆ. ಬದುಕಿನಲ್ಲಿ ಹಲವಾರು ಜನ-ರಿಗೆ ಮಾರ್ಗದರ್ಶಿಯಾಗಿಯೂ ನಿಲ್ಲುತ್ತಾನೆ. ದಿವ್ಯವಾದ ಎತ್ತರವಾದ ಸ್ಥಾನವನ್ನು ಗಳಿಸಿಕೊಳ್ಳಲು ತೃಪ್ತಿ ಸಹಕಾರಿಯಾಗಿದೆ. ತಾನು ಬೆಳೆಯುವದರೊಂದಿಗೆ ಇತರರನ್ನು ಬೆಳೆಸುವ ಶಕ್ತಿಯನ್ನು ನೀಡುವುದೇ ತೃಪ್ತಿ. ತೃಪ್ತಿ ಎನ್ನುವ ಭಾವ ಕೇವಲ ಒಂದು ದಿನದಲ್ಲಿ ಗಳಿಸುವಂತಹ ಭಾವವಲ್ಲ. ಗೆಲುವು ಎನ್ನುವುದು ಹೋರಾಟದ ಕೊನೆಯಲ್ಲಿ ಸಿಗುವಂತೆ ಬದುಕಿನ ಹೋರಾಟದ ಹಲವು ವರ್ಷಗಳ ಕಠಿಣ ಶ್ರಮಕ್ಕೆ ದೊರೆಯುವ ಭಾವವೇ ತೃಪ್ತಿ. ಹೀಗಾಗಿ ನಾವು ತೃಪ್ತಿಗಾಗಿ ಹಲವು ವರ್ಷಗಳವರೆಗೂ ಶ್ರಮಿಸಬೇಕು.

ಸದ್ಗುಣಗಳ ರಾಜ

ಪ್ರತಿಯೊಬ್ಬ ಮನುಷ್ಯನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಅತ್ಯಂತ ಶ್ರೇಷ್ಠ ಗುಣವೆಂದರೆ ತೃಪ್ತಿ. ತೃಪ್ತಿ ಮನುಷ್ಯ ಅನುಭವಿಸುವ ಸುಖ. ನಮ್ಮಲ್ಲಿ ನಾವೇ ಬೆಳಸಿಕೊಳ್ಳಬೇಕಾದ ಸದ್ಗುಣಗಳ ರಾಜ. ನೊಂದ ಜೀವಿಗೆ ತಂಪನ್ನು ಈಯುವುದು ನಿಜವಾದ ಮಾನವೀಯ ಧರ್ಮ. ಮಾಡುವ ಕೆಲಸವನ್ನು ಪ್ರೀತಿಯಿಂದ ಮತ್ತು ಶ್ರದ್ಧೆಯಿಂದ ಮಾಡಿದರೆ ಸಾಕು. ತೃಪ್ತಿ ಮನದಲ್ಲಿ ಮನೆ ಮಾಡುತ್ತದೆ. ಸದಾ ಸಣ್ಣ ಪುಟ್ಟ ಸಂಗತಿಗಳ ಕುರಿತು ಕ್ಷುಲ್ಲಕವಾಗಿ ವಿಚಾರ ಮಾಡುತ್ತ ಸ್ವಾರ್ಥಿ ಬದುಕು ಸಾಗಿಸುತ್ತ ಅತೃಪ್ತಿಯಲ್ಲಿ ಮುಳುಗುವವರು ಇಂಥ ಉದಾತ್ತ ಗುಣವನ್ನು ಮೈಗೂಡಿಸಿಕೊಂಡರೆ ಬದುಕಿನ ನಿಜವಾದ ಅರ್ಥ ಗೋಚ-ರಿಸಲಾರಂಭಿಸುವದು.

ನೀವು ಜೀವನದಲ್ಲಿ ಯಾವುದನ್ನು ಸಂಕೀರ್ಣ, ಸಮಸ್ಯೆಗಳೆಂದು ಭಾವಿಸುತ್ತಿರೋ ಅದನ್ನೊಮ್ಮೆ ಶಾಂತ ಚಿತ್ತರಾಗಿ ಪ್ರೀತಿ ತುಂಬಿದ ವಿಶಾಲ ಹೃದಯದಲ್ಲಿ ಸರಳ ದೃಷ್ಟಿ ಕೋನದಿಂದ ನೋಡಿದರೆ ಪವಾಡ ಸದೃಶದಂತೆ ತೃಪ್ತಿ ನಿಮ್ಮ ಬಳಿ ಹರಿಯುತ್ತದೆ. ಅಸಾಧಾರಣ ಆನಂದ ಉಲ್ಲಾಸವನ್ನೂ ನೀಡುತ್ತದೆ. ಜೀವನದ ನಿಜವಾದ ಸಂಪತ್ತು ತೃಪ್ತಿ. ಅದಲ್ಲದೇ ಶಾಂತಿಯ ತಾಯಿ ಕೂಡ. ತೃಪ್ತಿ ಗೆಲುವಿಗೆ ಸಂತೋಷಕ್ಕೆ ನೆಮ್ಮದಿಯ ಬದುಕಿಗೆ ಸೋಪಾನವಾಗಿದೆ. ತೃಪ್ತಿ ಎಂಬ ಸೋಪಾನವನ್ನು ಬಳಸಿ ನೆಮ್ಮದಿಯ ಜೀವನ ನಮ್ಮದಾಗಿಸಿಕೊಳ್ಳೋಣ.

# ಯಶಸ್ವಿ ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್‌ಗೆ ಮತ ನೀಡಿ :ಯಶವಂತರಾಯಗೌಡ

ಉದಯರಶ್ಮಿ ನ್ಯೂಸ್




ಇಂಡಿ: ಬಿಜೆಪಿ ಕಾರ್ಯಗಳನ್ನು ಪ್ರಶ್ನೆ ಮಾಡಿದವರಿಗೆ ಜೈಲಿಗೆ ಅಟ್ಟುತ್ತಿದ್ದಾರೆ. ದೇಶದಲ್ಲಿ ಒಂದು ರೀತಿಯ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಮಂಗಳವಾರ ಸಾಯಂಕಾಲ ಪಟ್ಟಣದ ಸಿಂದಗಿ ರಸ್ತೆಯ ಧನಶೆಟ್ಟಿ ಮಂಗಲ ಕಾರ್ಯಾಲಯದಲ್ಲಿ ಆಯೋಜಿಸಿದ್ದ ವಿಜಯಪುರ ಜಿಲ್ಲಾ ಲೋಕಸಭೆಯ ಚುನಾವಣೆಯ ಪ್ರಚಾರ ಕಾರ್ಯಕ್ರಮಲ್ಲಿ ಅವರು ಮಾತನಾಡಿದರು.

ಸಂವಿಧಾನದ ಬದಲಾವಣೆಯ ಹುನ್ನಾರ ಮಾಡುತ್ತಿದ್ದಾರೆ. ದೇಶದಲ್ಲಿ ಸರ್ವಾಧಿಕಾರದ ಧೋರಣೆಯಿದೆ ಎಂದು ಆರೋಪಿಸಿದ ಅವರು, ಯಶಸ್ವಿ ಪ್ರಜಾ ಪ್ರಭುತ್ವಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಮನವಿ ಮಾಡಿದರು.

ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ದೇಶದ ಜನತೆಯ ಗುಲಾಮಗಿರಿ ಕಿತ್ತೊಗೆಯಲು ಮತ್ತು ಸ್ವಾತಂತ್ರ್ಯ ತಂದು ಕೊಡಲು ಕಟ್ಟಿದ ಪಕ್ಷ ಕಾಂಗ್ರೆಸ್. ಅದಕ್ಕೆ ತನ್ನದೇಯಾದ ಇತಿಹಾಸವಿದೆ. ಅದನ್ನು ಹುಟ್ಟುಹಾಕಿದ ಅನೇಕರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ ಎಂದು ಹೇಳಿದರು.

ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ, ದೇಶದ ಪ್ರತೀ ಕುಟುಂಬದ ಮಹಿಳೆಗೆ ವರ್ಷಕ್ಕೆ 1 ಲಕ್ಷ ಹಣ ನೀಡುವದಲ್ಲದೇ ಯುವಕರಿಗೆ ಉದ್ಯೋಗ ನೀಡಲಾಗುವದು ಎಂದು ಭರವಸೆ ನೀಡಿದರು.

ಬ.ಬಾಗೇವಾಡಿ ಶಾಸಕ, ಸಚಿವ ಶಿವಾನಂದ ಪಾಟೀಲ ಮಾತನಾಡಿ, ದೇಶದಲ್ಲಿ ಬಿಜೆಪಿ ಜಾತಿ ರಾಜಕಾರಣ ಮಾಡುತ್ತಿದೆ. ಅಂತವರಿಗೆ ದೂರ ಇಡಿ. ಸರ್ವರನ್ನೂ ಗೌರವಿಸುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಆಯ್ಕೆ ಮಾಡಬೇಕೆಂದರು.

ಬಿಜೆಪಿ ಬರ ಪರಿಹಾರದ ಹಣ ನೀಡಿಲ್ಲ. ರೈತರ ಬೆಳೆಗಳಿಗೆ ಯೋಗ್ಯ ಬೆಲೆ ನೀಡಿಲ್ಲ ಎಂದು ಆರೋಪಿಸಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುವದಲ್ಲದೇ ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡುವದಾಗಿ ಭರವಸೆ ನೀಡಿದರು.

ಮುದ್ದೇಬಿಹಾಳ ಶಾಸಕ ಅಪ್ಪಾಜಿ ನಾಡಗೌಡ, ಸಿಂದಗಿ ಶಾಸಕ ಅಶೋಕ ಮನಗೂಳಿ, ವಿಜಯಪುರ ಲೋಕ ಸಭೆಯ ಕಾಂಗ್ರೆಸ್ ಅಭ್ಯರ್ಥಿ ಎಚ್.ಆರ್. (ರಾಜು) ಆಲಗೂರ ಮಾತನಾಡಿದರು.

ಮಾಜಿ ಶಾಸಕ ಶರಣಪ್ಪ ಸುಣಗಾರ, ಕಾಂಗ್ರೆಸ್ ಪಕ್ಷದ ಚುನಾವಣೆಯ ವೀಕ್ಷಕ ಸೈಯದ್, ವಿಧಾನ ಪರಿಷತ್ ಸದಸ್ಯ ಪ್ರಕಾಶ ರಾಠೋಡ ಮಾತನಾಡಿ, ಕಾಂಗ್ರೆಸ ಪಕ್ಷದ ಅಭ್ಯರ್ಥಿ ರಾಜು ಆಲಗೂರ ಪರ ಮತ ಯಾಚಿಸಿದರು.

ವಿಜಯಪುರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿ ಶಾಸಕ ವಿಠ್ಠಲ ಕಟಕದೋಂಡ, ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಅಮೀದ ಮುಷರಫ್, ಮಾಜಿ ಶಾಸಕ ಮುಕುಬುಲ್ ಭಾಗವಾನ, ಅರುಣ ರಾಠೋಡ, ಕಾಂತಾ ನಾಯಕ, ಇಲಿಯಾಸ್ ಬೋರಾಮಣಿ, ಬಾಬುಸಾಹುಕಾರ ಮೇತ್ರಿ, ಜೆಟ್ಟೆಪ್ಪ ರವಳಿ, ಅರ್ಜುನ ಚವ್ಹಾಣ, ಗುರಣಗೌಡ ಪಾಟೀಲ, ಮಹಾದೇವ ಪೂಜಾರಿ, ಶೇಖರ ನಾಯಕ, ನಿರ್ಮಲಾ ತಳಕೇರಿ, ಶೈಲಜಾ ಜಾಧವ, ಎಂ.ಆರ್. ಪಾಟೀಲ, ಶ್ರೀಕಾಂತ ಕುಡಿಗನೂರ ಇದ್ದರು.

ಜಾವೀದ ಮೋಮಿನ ಸ್ವಾಗತಿಸಿದರು. ತಮ್ಮಣ್ಣ ಪೂಜಾರಿ ನಿರೂಪಿಸಿದರು.

# ನೇಹಾ ಕೊಲೆ ಪ್ರಕರಣ ಮುಕ್ತ ತನಿಖೆಗೆ ನಡಹಳ್ಳಿ ಆಗ್ರಹ

ಉದಯರಶ್ಮಿ ನ್ಯೂಸ್




ಮುದ್ದೇಬಿಹಾಳ: ನೇಹಾ ಕೊಲೆ ಪ್ರಕರಣ ಎಲ್ಲ ಆಯಾಮಗಳಲ್ಲಿ ಮುಕ್ತ ತನಿಖೆ ನಡೆಯಬೇಕು ಎಂದು ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಒತ್ತಾಯಿಸಿದರು.

ಹುಬ್ಬಳ್ಳಿಯಲ್ಲಿ ಹತ್ಯೆಯಾದ ನೇಹಾಳಿಗೆ ಪಟ್ಟಣದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ವಿವಿಧ ಹಿಂದೂ ಪರ ಸಂಘಟನೆಗಳು, ವ್ಯಾಪಾರಸ್ಥರು, ನಾಗರಿಕರ ಪರವಾಗಿ ಹಮ್ಮಿಕೊಳ್ಳಲಾಗಿದ್ದ ಶೃದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಕೊಲೆಗಾರ ಫಯಾಜ ಮತ್ತು ಅವನ ಬೆಂಬಲವಾಗಿ ನಿಂತಿರುವ ಎಲ್ಲರಿಗೂ ಉಗ್ರ ಶಿಕ್ಷೆಯಾಗಬೇಕೆನ್ನುವದು ನೇಹಾಳ ಕುಟುಂಬದ ಮತ್ತು ಎಲ್ಲ ಕನ್ನಡಿಗರ ಬೇಡಿಕೆಯಾಗಿದೆ ಎಂದರು.

ವಿಶ್ವ ಹಿಂದೂ ಪರಿಷತ್ ಮುಖಂಡ ಶ್ರೀಮಂತ ದುದ್ದಗಿ ಮಾತನಾಡಿ, ಸ್ವತಂತ್ರ ಬಂದು ಸಾಕಷ್ಟು ವರ್ಷಗಳಾದರೂ ನಮ್ಮ ಮನೆಯ ಹೆಣ್ಣು ಮಕ್ಕಳು ಬೆಳಿಗ್ಗೆ ಮನೆಯಿಂದ ಹೋದರೆ ಮರಳಿ ಸೌಖ್ಯವಾಗಿ ಮನೆಗೆ ಬರುವವರೆಗೂ ಸಮಾಧಾನ ಇರಲ್ಲ. ಹಿಂದೂಗಳಲ್ಲಿ ಒಗ್ಗಟ್ಟು ಕಡಿಮೆಯಾದ ಪರಿಣಾಮ ಹಿಂದೂಗಳ ಮೇಲೆ ದಬ್ಬಾಳಿಕೆಯಾಗುತ್ತಿದೆ. ಹಿಂದು ಹೆಣ್ಣುಮಕ್ಕಳನ್ನು ಟಾರ್ಗೇಟ್ ಮಾಡಲಾಗುತ್ತಿದೆ. ಹಿಂದೆ ಬಿದ್ದು ಪ್ರೀತಿಸುವಂತೆ ಒತ್ತಾಯಿಸಲಾಗುತ್ತಿದೆ ಹಿಂದೂ ಹೆಣ್ಣುಮಕ್ಕಳು ಜಾಗೃತರಾಗಬೇಕಾಗಿದೆ ಎಂದರು.

ಹೋರಾಟಗಾರ ಬಸಯ್ಯ ನಂದಿಕೇಶ್ವರಮಠ, ಪ್ರಮುಖರಾದ ವಿಕ್ರಂ ಓಸ್ವಾಲ್, ವಾಸುದೇವ ಶಾಸ್ತ್ರಿ ಶಿವಯೋಗಪ್ಪ ರಾಂಪೂರ, ಕಾಶಿಬಾಯಿ ರಾಂಪೂರ, ಬಿ.ಜಿ.ಜಗ್ಗಲ ವಕೀಲರು, ಬಸಲಿಂಗಪ್ಪ ರಕ್ಕಸಗಿ, ಡಿಎಸ್‌ಎಸ್ ಮುಖಂಡ ಹರೀಶ ನಾಟೇಕಾರ, ಸಿದ್ಧರಾಜ ಹೊಳಿ, ಸಂಜು ಬಾಗೇವಾಡಿ, ರವೀಂದ್ರ ಬಿರಾದಾರ, ಪರಶುರಾಮ ನಾಲತವಾಡ, ರಾಜು ಬಳ್ಳೊಳ್ಳಿ, ಜಗದೀಶ ಕಂಠಿ, ಬಸವರಾಜ ಮುರಾಳ ಸೇರಿದಂತೆ ಮತ್ತೀತರರು ಭಾಗಿಯಾಗಿದ್ದರು.

# ರಾಹುಲ್ ಕಾರ್ಯಕ್ರಮ ಯಶಸ್ವಿಗೊಳಿಸಿ :ಶಾಸಕ ನಾಡಗೌಡ

ಉದಯರಶ್ಮಿ ನ್ಯೂಸ್

ತಾಳಿಕೋಟಿ: ಸಂಸದ ಮತ್ತು ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಏ.26 ಶುಕ್ರವಾರ ರಂದು ವಿಜಯಪುರ ಪ್ರವಾಸ ಕೈಗೊಂಡು ಅಭ್ಯರ್ಥಿ ರಾಜು ಆಲಗೂರ ಪರ ಪ್ರಚಾರ ನಡೆಸಲಿದ್ದಾರೆ. ಈ ಸಮಾವೇಶದಲ್ಲಿ ಮುದ್ದೇಬಿಹಾಳ ಮತ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಶಾಸಕ ಹಾಗೂ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ (ಅಪ್ಪಾಜಿ) ಹೇಳಿದರು.



ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಅಂದು ಮುಂಜಾನೆ 11:00 ಗಂಟೆಗೆ ನಗರದ ಸೋಲಾಪೂರ ರಸ್ತೆಯಲ್ಲಿರುವ ಬಿ ಎಲ್ ಡಿಇ ನೂತನ ಕ್ಯಾಂಪಸ್ ನಲ್ಲಿ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿದ್ದು ರಾಹುಲ್ ಗಾಂಧಿಯವರೊಂದಿಗೆ ಎ ಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ ಸಿ ವೇಣುಗೋಪಾಲ ಹಾಗೂ ಸಚಿವರಾದ ಎಂ ಬಿ ಪಾಟೀಲ ಶಿವಾನಂದ ಪಾಟೀಲ ಜಿಲ್ಲೆಯ ಶಾಸಕರಾದ ಯಶವಂತರಾಯ ಗೌಡ ಪಾಟೀಲ ವಿಠ್ಠಲ ಕಟಕದೊಂಡ ಅಶೋಕ ಮನಗೂಳಿ ವಿಧಾನ ಪರಿಷತ್ ಸದಸ್ಯ ಸುನಿಲ್ ಗೌಡ ಪಾಟೀಲ ಪಕ್ಷದ ಮುಖಂಡರು ಉಪಸ್ಥಿತರಿರಲಿದ್ದಾರೆ. ಕಾರಣ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಈ ಸಮಾವೇಶದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಅವರು ತಿಳಿಸಿದರು.

# ಶ್ರೀರಾಮ ಭಂಟ ಹನುಮಂತ

ಪ್ರತಿ ವರ್ಷ ಚೈತ್ರಮಾಸದ ಹುಣ್ಣಿಮೆಯಂದು ಹನುಮ–ಜಯಂತಿಯನ್ನು ಆಚ–ರಿಸಲಾಗುತ್ತದೆ. ಈ ಸಮಯದಲ್ಲಿ ಚಂದ್ರನು ಕನ್ಯಾರಾಶಿ ಹಾಗೂ ಸೂರ್ಯನು ಮೇಷ ರಾಶಿಯಲ್ಲಿ ಸಾಗುತ್ತಾನೆ. ಮಂಗಳವಾರ ಅಥವಾ ಶನಿವಾರ ಹನುಮ–ಜಯಂತಿ ಬಂದರೆ ಅದರ ಮಹತ್ವ ಹೆಚ್ಚು ಎಂಬ ನಂಬಿಕೆ ಭಕ್ತ ಜನರಲ್ಲಿದೆ. ಹನುಮಂತನು ಮಹಾದೇವನ ಅವತಾರವೆಂತಲೂ ಹೇಳಲಾಗುತ್ತದೆ. ಹನುಮನಿಗೆ ಕೇಸರಿ ಬಣ್ಣ ಇಷ್ಟವಾದ ಕಾರಣ ಆ ದಿನ ದೇವಸ್ಥಾನ ವನ್ನು ಕೇಸರಿ ಧ್ವಜದಿಂದ ಅಲಂಕರಿಸಲಾಗುತ್ತದೆ.

ಎಲ್ಲ ಗ್ರಹಗಳಲ್ಲಿ ಮಹತ್ವವಾದ ಶನಿಗ್ರಹ ಜನರ ಕರ್ಮಫಲಗಳನ್ನು ಸರಿತೂಗಿಸುವವ ಹನುಮಂತನಿಗೆ ಮಾತ್ರ ಯಾವುದೇ ತೊಂದರೆ ನೀಡುವುದಿಲ್ಲವೆಂಬ ನಂಬಿಕೆಯಿದ್ದು ಶನಿದೋಷ ಪರಿಹಾರಕ್ಕಾಗಿ " ಹನುಮಾನ್ ಚಾಲೀಸಾ" ಪಠಿಸುವುದರಿಂದ ಮನಸ್ಸಿನ ಎಲ್ಲ ಭಯ ನಿವಾರಣೆಗೊಂಡು ಸಕಾರಾತ್ಮಕ ಶಕ್ತಿ ಮನೆಯೊಳಗೆ ಮನಸ್ಸಿನೊಳಗೆ ನೆಲೆಸುವುದೆಂಬ ದೃಢನಂಬಿಕೆಯಿಂದ ಶ್ರೀರಾಮ ನಾಮಸ್ಮರಣೆಯ ಜೊತೆ ಸುಂದರಕಾಂಡ ಪಾರಾಯಣ ಮಾಡಿ ಆಂಜನೇಯ ಸ್ವಾಮಿಯ ಆಶೀರ್ವಾದ



ಪಡೆಯಲು ದೇನಸ್ಥಾನಕ್ಕೆ ಹೋಗಿ ಬಡವರಿಗೆ ಅನ್ನದಾನ , ವಸ್ತ್ರದಾನ ಮಾಡುವುದು ಪ್ರತೀತಿ.

**ಹನುಮ ಜಯಂತಿ ಮಂತ್ರ**

ಓಂ ಶ್ರೀ ಹನುಮತೇ ನಮಃ

ಅಷ್ಟ ಸಿದ್ಧಿ ನವ್ ನಿಧಿ ಕೆ ದಾತಾ

ಆಸ್ ವರ್ ದೀನ್ ಜಾನಕಿ ಮಾತಾ.



## ಭಾವರಶ್ಮಿ

– ಶೀತಲ್ ಹೆಗಡೆ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

# ಹುಬ್ಬಳ್ಳಿಯ 'ಸೆನ್ಸ್ ಎಸೆನ್ಸ್' ಸಂಸ್ಥೆಯಿಂದ ಅಂಧರಿಗಾಗಿ ಸಿದ್ಧಪಡಿಸಿದ ಪುಸ್ತಕ

# 'ಪ್ರಾಮಿಸ್ಡ್ ನೇಷನ್' ಕೃತಿ ಪ್ರಧಾನಿ ಮೋದಿಗೆ ಅರ್ಪಣೆ

ಉದಯರಶ್ಮಿ ನ್ಯೂಸ್




ಬೆಂಗಳೂರು: ದೇಶದ ಏಳು ಕೋಟಿ ಅಂಧರು, ದೃಷ್ಟಿದೋಷವಿದ್ದವರು ಪ್ರಧಾನಿ ನರೇಂದ್ರ ಮೋದಿಯವರ ಜೀವನ, ಕಾರ್ಯ ಮತ್ತು ನಾಯಕತ್ವದ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಹುಬ್ಬಳ್ಳಿ ಮೂಲದ ಟೀಮ್ ಸೆನ್ಸ್ ಎಸೆನ್ಸ್ ಸಂಸ್ಥೆಯು ಬ್ರೈಲ್ ಲಿಪಿಯಲ್ಲಿ ಸಿದ್ಧಪಡಿಸಿದ 'ಎ ಪ್ರಾಮಿಸ್ಡ್ ನೇಷನ್ ಹಾನರೇಬಲ್ ಶ್ರೀ ನರೇಂದ್ರ ಮೋದಿ – ದ ಮೇಕರ್ ಆಫ್ ನ್ಯೂ ಇಂಡಿಂ–ಯಾ' ಎಂಬ ಪುಸ್ತಕವನ್ನು ಇತ್ತೀಚೆಗೆ ಪ್ರಧಾನಿಯವರಿಗೆ ಅರ್ಪಿಸಲಾಯಿತು.

> " ವಿಆರ್‌ಎಲ್ ಲಾಜಿಸ್ಟಿಕ್ ಲಿ. ವತಿಯಿಂದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಅಡಿಯಲ್ಲಿ ನಾವು ಆರೋಗ್ಯ, ಶಿಕ್ಷಣ, ಕ್ರೀಡಾ ಕ್ಷೇತ್ರಗಳಲ್ಲಿ ಹಲವು ಜನರ ಜೀವನದಲ್ಲಿ ಅರ್ಥಪೂರ್ಣ ಬದಲಾವಣೆಗೆ ಪ್ರಯತ್ನಿಸಿದ್ದೇವೆ. ಈ ಕೆಲಸಗಳ ಸಕಾರಾತ್ಮಕ ಪರಿಣಾಮಗಳ ಬಗ್ಗೆ ನಮಗೆ ಹೆಮ್ಮೆಯಿದೆ. ಸಮಾಜದ ಎಲ್ಲರ ಏಳಿಗೆಗೆ ಪೂರಕವಾಗಿ ನಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತಲೇ ಇರುತ್ತೇವೆ. ಪ್ರಧಾನಿ ಅವರ ಜೀವನ ಸಾಧನೆ ಮತ್ತು ಅವರ ಕೈಂಕರ್ಯಗಳು ಅಂಧರಿಗೂ ಪ್ರೇರಣೆ ಆಗಲಿ ಎನ್ನುವ ಸದುದ್ದೇಶದಿಂದ ಈ ಪುಸ್ತಕ ಪ್ರಕಟಿಸಲು ನೆರವಾಗಿದ್ದೇವೆ."
>
> – ಡಾ. ಆನಂದ ಸಂಕೇಶ್ವರ ವ್ಯವಸ್ಥಾಪಕ ನಿರ್ದೇಶಕರು, ವಿಆರ್‌ಎಲ್ ಸಮೂಹ ಸಂಸ್ಥೆ



ಸೆನ್ಸ್ ಎಸೆನ್ಸ್ ಸಂಸ್ಥೆಯ ರುಷಾಲಿ ಭಂಡಾರಿ ಮತ್ತು ಯಶ್ವಿ ಭಂಡಾರಿ ಅವರು ಅತ್ಯಂತ ಕಾಳಜಿಯಿಂದ ಸಿದ್ಧಪಡಿಸಿದ ಈ ವಿಶೇಷ ಪುಸ್ತಕವನ್ನು ವಿಆರ್–ಎಲ್ ಸಮೂಹ ಸಂಸ್ಥೆಯ ಸಹಯೋಗ ಮತ್ತು ಪ್ರಾಯೋಜಕತ್ವದಲ್ಲಿ ಹೊರತರಲಾಗಿದೆ. ದೇಶದ ಎರಡೂವರೆ ಲಕ್ಷ ಅಂಧ ಮಕ್ಕಳು ಹಾಗೂ ಕಣ್ಣಿನ ಸಮಸ್ಯೆ ಎದು–ರಿಸುತ್ತಿರುವ 7 ಕೋಟಿ ಜನರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಈ ಪುಸ್ತಕದಿಂದ ಸಾಕಷ್ಟು ಮಾಹಿತಿ ಪಡೆದು ಕೊಳ್ಳಬಹುದು.

ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ವಿಆರ್–ಎಲ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಆನಂದ ಸಂಕೇಶ್ವರ, ವಾಣಿ ಆನಂದ ಸಂಕೇಶ್ವರ, ರುಷಾಲಿ, ಯಶ್ವಿ ಅವರು ಪುಸ್ತಕದ ಐದು ಪ್ರತಿಗಳನ್ನು ಅರ್ಪಿಸಿದರು.

ಪುಸ್ತಕದ ಮುಖಪುಟ ವೀಕ್ಷಿಸಿ, ಒಳಪುಟಗಳನ್ನು ತಿರುವಿ ಹಾಕುತ್ತ ಅತ್ಯಂತ ಆಸಕ್ತಿಯಿಂದ ವಿವರಗಳನ್ನು ಕೇಳಿ ತಿಳಿದುಕೊಂಡ ಮೋದಿಯವರು, ಇದೊಂದು ವಿಶಿಷ್ಟ ಕೃತಿಯಾಗಿದೆ. ನಿಜಕ್ಕೂ ವಿಶೇಷ ಸಾಧನೆ ಮಾಡಿದ್ದೀರಿ ಎಂದು ಪ್ರಶಂಸಿಸಿದರು.

ವಿಆರ್‌ಎಲ್ ಸಮೂಹ ಸಂಸ್ಥೆಯ ಬೆಂಬಲದಿಂದ ಪುಸ್ತಕ ಹೊರತರಲು ಸಾಧ್ಯವಾಯಿತು. ಇದನ್ನು ಅಂಧರ ಶಾಲೆಗಳಿಗೆ ತಲುಪಿಸಲಾಗಿದೆ. ಆಸಕ್ತ ಅಂಧರಿಗೆ ಲಭಿಸುವಂತೆ ಮಾಡಲಾಗಿದೆ. ನಮ್ಮ ದೇಶ ಮಾತ್ರವಲ್ಲ, ಅನ್ಯ ದೇಶಗಳ ಅಂಧರೂ ನಮ್ಮ ಪ್ರಧಾನಿಯವರ ಸಾಧನೆಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುವ ಆಸೆಯಿದ್ದು, ವಿವಿಧ ದೇಶಗಳಿಗೆ ಪುಸ್ತಕವನ್ನು ತಲುಪಿಸುವ ಗುರಿ ಹೊಂದಿದ್ದೇವೆ ಎಂದು ರುಷಾಲಿ ಮತ್ತು ಯಶ್ವಿ ವಿವರಿಸಿದರು.

ನಿಮ್ಮ ಗುರಿ ಒಳ್ಳೆಯದು ಹಾಗೂ ವಿಶಾಲವಾಗಿದೆ. ವಿಆರ್‌ಎಲ್ ಸಮೂಹ ಸಂಸ್ಥೆ ಇಂತಹ ಒಳ್ಳೆಯ ಪ್ರಯತ್ನವನ್ನು ಬೆಂಬಲಿಸಿ ಯಶಸ್ವಿಗೊಳಿಸಿರುವುದು ಅಭಿನಂದನಾರ್ಹ ಎಂದು ಪ್ರಧಾನಿಯವರು ಹೇಳಿದರು.

ಡಾ. ಆನಂದ ಸಂಕೇಶ್ವರ ಅವರ ಕಾಳಜಿಯನ್ನು ಇದೇ ವೇಳೆ ಪ್ರಶಂಸಿಸಿದ ಮೋದಿಯವರು, ಬೇರೆ ಬೇರೆ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಲು ಪ್ರೋತ್ಸಾಹ ನೀಡುವ ಮೂಲಕ ಸಮಾಜಕ್ಕೆ ಕೊಡುಗೆ ನೀಡುತ್ತಿದ್ದೀರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### ಉಷಾ ಕೃಷ್ಣಗೆ ಪುಸ್ತಕ ಕೊಡುಗೆ

ಜೀವನದಲ್ಲಿ ಒಮ್ಮೆಯಾದರೂ ಮೋದಿ ಅವರನ್ನು ನೋಡಲೇಬೇಕೆಂದು ಹಂಬಲಿಸುತ್ತಿದ್ದ ಬೆಂಗಳೂರಿನ ಉಷಾ ಕೃಷ್ಣ ಅವರ ಕನಸು ಮೊನ್ನೆ ಈಡೇರಿತು. ಶೇ.99 ದೃಷ್ಟಿದೋಷ ಇರುವ ಉಷಾ ಅವರೊಂದಿಗೆ ಮಾತನಾಡುತ್ತಲೇ ವಿಮಾನದಿಂದ 'ಎ ಪ್ರಾಮಿಸ್ಡ್ ನೇಷನ್' ಬ್ರೈಲ್ ಪುಸ್ತಕವನ್ನು ತರಿಸಿ ಹಸ್ತಾಂತರಿಸಿ ವಿಆರ್–ಎಲ್ ಸಂಸ್ಥೆಯ ಶ್ರಮ ತಮಗೆ ಸಹಾಯವಾಗಲಿ ಎಂದು ಶುಭ ಹಾರೈಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಸಾಧನೆ ಕುರಿತ ಈ ಪುಸ್ತಕವನ್ನು ಕೇಂದ್ರ ಗೃಹಮಂತ್ರಿ ಅಮಿತ್ ಷಾ ಅವರು ಕಳೆದ ಜನವ–ರಿಯಲ್ಲಿ ದೆಹಲಿಯಲ್ಲಿ ಬಿಡುಗಡೆ ಮಾಡಿದ್ದರು.

# ಸಾರ್ವಜನಿಕರು ಶಸ್ತ್ರಚಿಕಿತ್ಸೆ ಸೌಲಭ್ಯ ಪಡೆದುಕೊಳ್ಳಿ :ಡಾ.ಬಸವರಾಜ

ಉದಯರಶ್ಮಿ ನ್ಯೂಸ್

ವಿಜಯಪುರ: ತಾಲೂಕಾ ಸಾರ್ವಜನಿಕ ಆಸ್ಪತ್ರೆ ಸಿಂದಗಿಯಲ್ಲಿ ಶಸ್ತ್ರಚಿಕಿತ್ಸಕರು, ತಜ್ಞವೈದ್ಯರು ಲಭ್ಯವಿರುವದರಿಂದ ಹೆರಿಗೆ ಹಾಗೂ ಇನ್ನಿತರ ಶಸ್ತ್ರಚಿಕಿತ್ಸೆಯನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಮಾಡಲಾಗುತಿದ್ದು. ಸಿಂದಗಿ ತಾಲೂಕಿನ ಎಲ್ಲ ಸಾರ್ವಜನಿಕರು ಸರ್ಕಾರಿ ಆಸ್ಪತ್ರೆಯಲ್ಲಿ ದೊರೆಯುವ ಎಲ್ಲ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಬಸವರಾಜ ಹುಬ್ಬಳ್ಳಿ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಸಿಂದಗಿಯ ತಾಲೂಕಾ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಅವರು ಆಸ್ಪತ್ರೆಯ ದಾಖಲಾತಿ, ಕಾರ್ಯವೈಖರಿಯನ್ನು ಪರಿಶೀಲಿಸಿ ವೈದ್ಯರೊಂದಿಗೆ ಸಭೆ ನಡೆಸಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾ–ರಿಗಳು ಹಾಗೂ ಸಾರ್ವಜನಿಕ ಆಸ್ಪತ್ರೆ ಸಿಂದಗಿ ಮುಖ್ಯ ವೈದ್ಯಾಧಿಕಾ–ರಿಗಳಾದ ಡಾ.ಕೆ.ಡಿ ಗುಂಡಬಾವಡಿ, ಈಗಾಗಲೇ ಆಸ್ಪತ್ರೆಯಲ್ಲಿ ಕಳೆದ ಮೂರು ದಿನಗಳಲ್ಲಿ ಎರಡು ಜನ ಗರ್ಭಿಣಿಯ–ರಿಗೆ ಸಿಜರಿಯನ್, ಒಂದು ಹರ್ನಿಯಾ ಶಸ್ತ್ರಚಿಕಿತ್ಸೆ, ಎರಡು ಜನರಿಗೆ ಗಡ್ಡೆ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿದೆ. ಎಲ್ಲರೂ ಆರೋಗ್ಯದಿಂದ ಇರುತ್ತಾರೆ. ಸದರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ತಜ್ಞವೈದ್ಯರಾದ ಡಾ.ನೂರೇಸ ಪಟೇಲ್ ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು, ಡಾ.ರಾಜಶೇಖರ ಸಿ.ಹೆಚ್. ಚಿಕ್ಕಮಕ್ಕಳ ತಜ್ಞರು, ಡಾ.ಸಾಯಬಣ್ಣ ಗುಣಕಿ. ಅವರಳಿಕೆ ತಜ್ಞರು, ಡಾ.ನಾಗರಾಜ ಶಸ್ತ್ರಚಿಕಿತ್ಸಕರು, ಡಾ.ಶಂಕರರಾವ ದೇಶಮುಖ ಶಸ್ತ್ರಚಿಕಿತ್ಸಕರು, ಡಾ.ರಮೇಶ ರಾಠೋಡ ಆರ್.ಎಮ್.ಓ, ಶ್ರೀಮತಿ ವಿದ್ಯಾವತಿ ಹೀರೆಮಠ ನರ್ಸಿಂಗ್ ಸೂಪರಡೆಂಟ್, ರಾಯಣ್ಣ ಸೊನ್ನಳ್ಳಿ ನರ್ಸಿಂಗ್ ಆಫೀಸರ್, ಶ್ರೀಮತಿ ಅಶ್ವಿನಿ ಮೊಟಗಿ




ನರ್ಸಿಂಗ್ ಆಫೀಸರ್, ಶ್ರೀಮತಿ ಅಶ್ವಿನಿ ಸಾವಳಗಿ ನರ್ಸಿಂಗ್ ಆಫೀಸರ್ ಮೇಲ್ಕಾಣಿಸಿದ ಎಲ್ಲ ಸಿಬ್ಬಂದಿಯವರು ಸಾರ್ವಜನಿಕ ಆಸ್ಪತ್ರೆಯಲ್ಲಿ ನಿರಂತರ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿದರು.

# ಶಿರಸಿಯ ಗೌರಿಗೆ ಅಕ್ಕ ಪ್ರಶಸ್ತಿ ಪ್ರಧಾನ

ಉದಯರಶ್ಮಿ ನ್ಯೂಸ್

ಚಿಮ್ಮಡ: ಬಾವಿ ಗೌರಮ್ಮ–ಎಂದೇ ರಾಜ್ಯದಾದ್ಯಂತ ಖ್ಯಾತಳಾದ ಸಿರಸಿಯ ಶ್ರೀಮತಿ ಗೌರಿ ಸಿ. ನಾಯ್ಕ ಅವರಿಗೆ ಚಿಮ್ಮಡ ಗ್ರಾಮದ ವಿರಕ್ತಮಠದಿಂದ 'ಅಕ್ಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಏಕಾಂಗಿಯಾಗಿ 5 ಬಾವಿಗಳನ್ನು ತೋಡಿ ಮನೆಗಳಿಗೆ, ಅಂಗನವಾಡಿ ಮಕ್ಕಳಿಗೆ ನೀರಿನ ಆಸರೆಯಾಗಿ ನಿಂತ 57 ವರ್ಷ ವಯಸ್ಸಿನ ಗೌರಮ್ಮಳ ಏಕಾಂಗಿ ಸಾಹಸಕ್ಕೆ ಚಿಮ್ಮಡ ಗ್ರಾಮದಲ್ಲಿ ಮಂಗಳವಾರ ನಡೆದ ಶ್ರೀ ವಿರಕ್ತಮಹಾಸ್ವಾಮಿಗಳ




ಪುಣ್ಯ ಸ್ಮರಣೋತ್ಸವ ಹಾಗೂ ಅಕ್ಕ ಮಹಾದೇವಿ ಜಯಂತಿ ಮಹೋತ್ಸವದ ಬೃಹತ್ ಕಾರ್ಯಕ್ರಮದಲ್ಲಿ ಪಂಚಶ್ರೀಗಳ ಸಮ್ಮುಖದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ಜ್ಯೋತಿ ಸುನೀಲ್ ಕುಮಾರ್.

("ನಮ್ಮ ಕಥಾ ಅರಮನೆ" ಬರಹಗಾರರು)



### ದಂಡ

ಕಾಲ ದಂಡ ಮಾಡದಿರೋ ಭಂಡ ಮಾನವಾ
ತೊರೆಯೋ ನಿನ್ನ ಹಠದ ಉದ್ಧಂಡ ಸ್ವಭಾವಾ
ಮಾಡು ದಂಡಕಮಂಡಲು ಪಿಡಿದವರ ಸೇವಾ
ಅಂಡಜವಾಹನ ಕಂಡು ರಕ್ಷಿಪ ಮುಗಿ ಕರವಾ

ದಂಡಿಸುವ ಯಮನು ನೀ ಚಂಡಿಯಾಗಲು
ಕೆಂಡದಂತೆ ಕುದಿದು ನೀನು ಪ್ರಚಂಡನಾಗಲು
ಮಂಡೆಯಲಿ ದಂಡದ ಹೆದರಿಕೆ ಬಲು ಇರಲು
ದಂಡಿಸುವ ಕೋದಂಡನು ನಿನಗಿದೆ ಸೋಲು

ಉಂಡಾಡಿಗುಂಡನಂತೆ ಇರಬೇಡ ಮನುಜ
ಹಿರಿಯರೆಲ್ಲಾ ದಂಡಿಸುವರಯ್ಯ ನಿನ್ನ ಸಹಜ
ಹಿಂಡಿನೊಳಗೆ ದಂಡನಾಯಕನಾಗು ಅಗ್ರಜ
ಗಂಡುಗಲಿ ನೀನಾದರೆ ಒಳಿತಾಗುವುದು ನಿಜ



ಖಂಡಿಸು ನೀ ಎಲ್ಲರ ದುಡುಕು ಸ್ವಭಾವವನು
ಖಂಡಿತಾ ದಂಡದಿ ಬಡಿಯಲು ಸೋಲುವನು
ಅಖಿಲಾಂಡಕೋಟಿಬ್ರಹ್ಮಾಂಡ ನಾಯಕನಿಹನು
ಬೇಡೆ ನಿರುತ ವರವೀವ ಜ್ಯೋತಿ ಸ್ವರೂಪನು

# ವಿದ್ಯಾರ್ಥಿ ಆನಂದ ಅಡಕೆ ಗೆ ಗ್ರಾಮಸ್ಥರ ಗೌರವ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯ ಚಡಚಣ ತಾಲೂಕಿನ ರೇವತಗಾಂವ ಗ್ರಾಮದ ಶಿಕ್ಷಕ ಮುಕುಂದ ಅಡಕೆ ಅವರ ಸುಪುತ್ರ ಆನಂದ ಅಡಕೆ ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಚಡಚಣದ ಸಂಗಮೇಶ್ವರ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಶೇ.98.7 ಅಂಕಗಳನ್ನು ಪಡೆದು ತಾಲೂಕು ಹಾಗೂ ಕಾಲೇಜಿಗೆ ಪ್ರಥಮ ಸ್ಥಾನವನ್ನು ಗಳಿಸಿ ಉತ್ತೀರ್ಣನಾಗಿ ಗ್ರಾಮದ ಕೀರ್ತಿಯನ್ನು ಹೆಚ್ಚಿಸಿದ ಪ್ರಯುಕ್ತ ಗ್ರಾಮದ ಪಿಕೆಪಿಎಸ್ ಕಾರ್ಯನಿರ್ವಾಹಕ ಅಧಿಕಾರಿ ಸುನೀಲ ಕೋಳಿ, ಅಮಸಿದ್ದ ಹಿರೇಕುರುಬರ, ನಿಂಗಪ್ಪ ಮೇತ್ರೆ, ಸಂತೋಷ ಕುಂಬಾರ, ಮಲ್ಲಿಕಾರ್ಜುನ ತಳ್ಳೆಯವರುಗಳು ವಿದ್ಯಾರ್ಥಿಗೆ ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಈ ವೇಳೆಯಲ್ಲಿ ಮಾತನಾಡಿದ ಪಿಕೆಪಿಎಸ್ ಕಾರ್ಯನಿರ್ವಾಹಕ ಅಧಿಕಾರಿ ಸುನೀಲ ಕೋಳಿಯವರು. ಸದಾ ಏಕಾಗ್ರತೆಯಿಂದ ಅಧ್ಯಯನ ಮಾಡುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಾಗುತ್ತದೆ. ನಿರಂತರವಾದ ಅಭ್ಯಾಸದಿಂದ ಉತ್ತಮ ಸಾಧನೆ ಮಾಡಲು ಸಾಧ್ಯ. ಯಾವುದೇ ವಿಷಯವನ್ನು ಕಷ್ಟಪಟ್ಟು ಅಧ್ಯಯನ ಮಾಡದೇ ಇಷ್ಟಪಟ್ಟು ಅಧ್ಯಯನ ಮಾಡಬೇಕು ಎಂದು ಹೇಳಿದರು.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR